ಮಿಖೇಲ ಕ್ಯಾರೋಝಿನೊ

# ಅಲೋಷಿಯುಸ್ ಗ್ವಾನೆಲ್ಲ

## ಇವರು ಒಳಿತನ್ನೇ ಮಾಡುತ್ತ ನಡೆದರು



Kannada Text

| | | |
|---|---|---|
| ಮೂಲ ಗ್ರಂಥ | : | Aloysius Guanella<br>He went about doing good |
| ಲೇಖಕಿ | : | Sr. Michela Carrozzino, Dsmp |
| ಭಾಷಾಂತರ | : | Fr. Antonysamy, CSsR<br>Mrs. Arputha Mary Mathew<br>Mr. Maruthi Nayak |
| ಮೇಲ್ವಿಚಾರಕರು | : | Fr. A. John Bosco, Sdc<br>Sr. S. Shanthi, Dsmp<br>Sr. Victoria William, Dsmp |
| ಪ್ರಕಾಶಕರು | : | Centro Studi Guanelliani, Roma, Italy |
| ಮುದ್ರಕರು | : | Creative Prints and Arts<br>Bangalore |
| ಪ್ರಥಮ ಮುದ್ರಣ | : | September 8, 2011 |

# ಪರಿಚಯ

**ಪೂ**ಜ್ಯರಾದ ಅಲೋಷಿಯಸ್ ಗ್ವಾನೆಲ್ಲ (1842–1915), ಅವರು ಎರಡು ಧಾರ್ಮಿಕ ಸಭೆಗಳಾದ 'ದೈವಾನುಗ್ರಹ ಮರಿಯಮ್ಮನವರ ಪುತ್ರಿಯರು' (Daughters of St. Mary of Providence) ಮತ್ತು 'ದಾನಶೀಲ ಸೇವಕರು' (Servants of Charity) ಸಂಸ್ಥೆಗಳ ಸಂಸ್ಥಾಪಕರು ಹಾಗೂ 'ಶ್ರೀ ಗ್ವಾನೆಲ್ಲರ ಸಾಮಾನ್ಯ ಸಹಕಾರಿಗಳು' ಮತ್ತು ಸಂಸ್ಥಾಪಕರು ಕೂಡ. ಇವರು ಇಟಲಿ ದೇಶದ ಔದ್ಯೋಗಿಕ ಅಭಿವೃದ್ಧಿಯ ಹಿಂದಿನ ಹಾಗೂ ಪ್ರಸಕ್ತ ಕಾಲದಲ್ಲಿ ಉದ್ಭವಿಸಿದ ನೂತನ ಬಗೆಯ ಬಡತನದ ಸಮಸ್ಯೆಗಳಿಗೆ ಪರಿಹಾರ ಒದಗಿಸಲೆಂದು, ದಾನ–ಧರ್ಮಗಳಲ್ಲಿ ಆರಂಭಿಕ ಪ್ರಯತ್ನಗಳನ್ನು ಅನುಷ್ಠಾನಕ್ಕೆ ತಂದ ದೇಶದ ಹತ್ತೊಂಭತ್ತು ಮತ್ತು 20ನೇ ಶತಮಾನದ ಧರ್ಮಗುರುಗಳ ಸಾಲಿಗೆ ಸೇರಿದವರಾಗಿರುತ್ತಾರೆ. ಅಲೋಷಿಯಸ್ ಗ್ವಾನೆಲ್ಲ ಅವರು ಇಂತಹ ಸಾಮಾಜಿಕ ಪರಿವರ್ತನೆಗೆ ತಮ್ಮನ್ನು ಅಳವಡಿಸಿಕೊಳ್ಳಲು ಶಕ್ತರಾಗಿದ್ದು, ತಾವು ಹೋದೆಡೆಯೆಲ್ಲಾ ನೂತನ ಕಾರ್ಯ ಆರಂಭಿಸಿ ಆ ನಗರದ ಬಗ್ಗೆ ಉತ್ಸಾಹ ಮತ್ತು ಸಂಪೂರ್ಣ ಅರ್ಥವಂತಿಕೆ ಯನ್ನು ಹೊಂದಿ ಬಡವರ ಸೇವೆಯ ಮೂಲಕವೇ ಸಾರ್ಥಕತೆಯನ್ನು ಪಡೆದರು. (A. Monticone, *Don Guanella e Roma, 9*)

ವಿಶಾಲಾರ್ಥದಲ್ಲಿ ಅವರ ಹೃದಯ ಯಾವಾಗಲೂ ಸಮಾಜ ಸೇವೆಗಾಗಿ ಮಿಡಿಯುತ್ತಿತ್ತು. ಮೂಲಭೂತ ಸೌಕರ್ಯಗಳಾದ ಊಟ–ವಸತಿಗಳಿಗಾಗಿ ಪರಿತಪಿಸುತ್ತಿದ್ದ ರೈತಾಪಿ ವರ್ಗ; 'ಕೈಯಲ್ಲಿ ಬಿಡಿಗಾಸು ಇಲ್ಲದ ಬಡಕಾರ್ಮಿಕರು; ಶಾಲೆಗೆ ಹೋಗಲು ಪರದಾಡುತ್ತಿದ್ದ ಮಕ್ಕಳು; ಅತೃಪ್ತಿ ಮತ್ತು ಆತಂಕ ಮುಖಗಳನ್ನು ಹೊತ್ತ ತಾಯಿ–ತಂದೆಯರು; ಅವಮಾನಕ್ಕೊಳಗಾದ ಯುವಜನತೆ ಹಾಗೂ ವ್ಯಾಪಕವಾಗಿದ್ದ ಕರುಣಾಜನಕ ಸ್ಥಿತಿಯನ್ನು ಪರಿಹರಿಸುವುದೇ ಅವರ ಕಾರ್ಯವಾಗಿತ್ತು (*Opere I, 302*)

*ಗುರು ಗ್ವಾನೆಲ್ಲರ ಪೂರ್ಣ ಭಾವಚಿತ್ರ 1912*



*ಸ್ಥಾಪಕರು ಕೈಗೊಂಡಂತೆ, ಅವರ ಸಭೆಗಳು ಅನಾಹುತಗಳ ವೇಳೆ ನೊಂದವರ ಸಹಾಯಕ್ಕೆ ಧಾವಿಸುತ್ತದೆ. ಇಲ್ಲಿ 2004 ಡಿಸೆಂಬರ್ ತಿಂಗಳ ಸುನಾಮಿಯ ನಂತರ.*



'ಅಲೋಷಿಯಸ್ ಗ್ವಾನೆಲ್ಲ' ಎಂಬ ಹೆಸರು, ಯಾವುದೇ ಬಗೆಯ ಸಂಕಷ್ಟಗಳನ್ನು ಅನುಭವಿಸುವ ಮಾನವ ಜೀವಿಗಳ ಪ್ರೀತಿಗೆ ಸಮನಾರ್ಥವಾಗಿದೆ; ಆ ನಾಮಧೇಯದ ಅರ್ಥವೆಂದರೆ, ತಿರಸ್ಕೃತಗೊಂಡ ಪರಿಸ್ಥಿತಿಗಳಲ್ಲಿ ಉಪಸ್ಥಿತಿಯಲ್ಲಿರುವುದು ಹಾಗೂ ವಿಚಾರಿಸುವವರು ಯಾರೂ ಇಲ್ಲದ ಪುರುಷ ಮತ್ತು ಮಹಿಳೆಯರಿಗೆ ಆಶ್ರಯ ನೀಡುವುದಾಗಿದೆ. ಅಂತವರನ್ನು ಅವರು ತಮ್ಮ ಆಶ್ರಮಗಳಿಗೆ ಸ್ವಾಗತಿಸುತ್ತಿದ್ದರು. ಅವರ ಜೀವನ ಚರಿತ್ರೆಯು ಜೀವಂತ ಸುವಾರ್ತೆಗೆ ಅತ್ಯುತ್ತಮ ಸಾಕ್ಷಿಯಾಗಿದೆ ಮಾತ್ರವಲ್ಲದೆ, ದೈವಶಾಸ್ತ್ರದ ಉದಾಹರಣೆಯೂ ಆಗಿತ್ತು. ಏಕೆಂದರೆ ಅವರ ನಿರ್ಣಯ ಹಾಗೂ ಅವರು ಕೈಗೊಂಡ ಒಳ್ಳೆಯ ಕಾರ್ಯಗಳು ಕ್ರೈಸ್ತ ವಿಶ್ವಾಸದ ಸತ್ವವನ್ನು ಪ್ರತ್ಯಕ್ಷಪಡಿಸುತ್ತ, ಎಲ್ಲರಿಗೂ ಸಾಂತ್ವನ ಮತ್ತು ವಿಶ್ವಾಸ ಒದಗಿಸುತ್ತ ಮಾನವ ಕುಲಕ್ಕೆ ಸತ್ಯವನ್ನು ದೃಢಪಡಿಸಿದರು. ದೇವರು ನಿರಂತರವಾಗಿ ತನ್ನ ಜನರನ್ನು ಭೇಟಿಯಾಗುತ್ತಲೇ ಇದ್ದಾರೆ.



*ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಗ್ವಾನೆಲ್ಲಿಯ ಕನ್ಯಾಸ್ತ್ರೀಯರು*

# 1842 ರಲ್ಲಿ



ಸದಾ ಗುರು ಅಲೋಷಿಯಸ್‌ರ ಹೃದಯದಲ್ಲಿ ನೆಲೆಸಿರುವ ರೆಟ್ಟಿಕ್ಕೆ ಆಲ್ಪ್ಸ್ ಪರ್ವತ ಶ್ರೇಣಿ.

ಅಲೋಷಿಯಸ್ ಗ್ವಾನೆಲ್ಲ ಅವರು ಜನಿಸಿದ ವರ್ಷವು ತುಂಬಾ ಪ್ರಾಮುಖ್ಯತೆ ಪಡೆದಿದೆ. ಏಕೆಂದರೆ ಈ ವರ್ಷದಲ್ಲಿ ನಡೆದ ಐತಿಹಾಸಿಕ ಘಟನಾವಳಿಗಳು ಮತ್ತು ಭೇಟಿಯಾದ ವ್ಯಕ್ತಿಗಳಿಂದಾಗಿ 1842ನೇ ವರ್ಷವು ಗುರುಸ್ಥಾನ ಮತ್ತು ವ್ಯಕ್ತಿಯನ್ನು ರೂಪಿಸಿತು.


ದೋಷಮುಕ್ತ ಮತ್ತು ಉತ್ತಮ ಜಗದ್ಗುರುವಾಗಿ ಅಧಿಕಾರವನ್ನು ಅಲಂಕರಿಸಿದ ವಿಶ್ವಗುರುವಾದ XVI ನೇ ಪೋಪ್ ಗ್ರೆಗೋರಿಯವರ ಅಧಿಕಾರಾವಧಿಯಲ್ಲಿ (1831–1846) ಅಲೋಷಿಯಸ್ ಗ್ವಾನೆಲ್ಲರವರು ಜನಿಸಿದರು. ಈ ನಿಟ್ಟಿನಲ್ಲಿ, ಹುಟ್ಟಿನಿಂದಲೇ ತಮಗೆ ಪ್ರಶಸ್ತಿ ಪ್ರಧಾನ ಪಡೆದ ಗುರುವಿನಂತೆ ಗ್ವಾನೆಲ್ಲರವರು ತಮ್ಮ ನಡೆನುಡಿಯಲ್ಲಿ ತೋರಿಸಿಕೊಂಡರು. ವಿಶಿಷ್ಟ ಫಲಿತಾಂಶಗಳನ್ನು ಕಂಡ 19ನೇ ಶತಮಾನ ಕ್ರೈಸ್ತ ಸೇವಾ ಪ್ರಚಾರ ಕಾರ್ಯಗಳ ನವೀಕರಣವು, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿಯೂ ಘಟಿಸಿದ್ದು, ಪ್ರಥಮ ಗ್ವಾನೆಲ್ಲ ಸದಸ್ಯರ ಸೇವಾಕಾರ್ಯದ ಪ್ರದೇಶ (1913) ನಿರ್ಮಾಣಗೊಳ್ಳಲು ಈ ವಿಶ್ವಗುರುಗಳು ಕಾರಣರಾದರು. ತಮ್ಮ ಸಭೆಯ ಧರ್ಮಭಗಿನಿಯರನ್ನು ಅಮೆರಿಕಾಗೆ ಕಳುಹಿಸುವ ಮೊದಲು ಗುರು ಗ್ವಾನೆಲ್ಲಾರವರು ತಾವೇ ಖುದ್ದಾಗಿ ತೆರಳಿದಾಗ, ಶಿಕಾಗೋದಲ್ಲಿದ್ದ ಸ್ಕಾಲಬ್ರಿನಿಯನ್

*1831 ರಿಂದ 1846 ಅವಧಿಯಲ್ಲಿ ವಿಶ್ವಗುರುಗಳಾಗಿದ್ದ ಪೋಪ್ 16ನೇ ಗ್ರೆಗೊರಿಯವರು – 18 ಸೆಪ್ಟೆಂಬರ್ 1765 ರಲ್ಲಿ ಬೆಲ್ಲುನೋ ಊರಲ್ಲಿ ಜನಿಸಿದರು*





ದಾನಶೀಲ ಸೇವಕರ (Servants of Charity) ಸಭೆಯ ಸದಸ್ಯರ ಧಾರ್ಮಿಕ ಸಮರ್ಪಣೆ – 1908



ಸಂತ ಜೋಸೆಫ್ ಬೆನೆಡಿಕ್ಟ್ ಕೊತ್ತೊಲೆಂಗೂ ಅವರ ಪ್ರತಿಮೆ; ಸ್ವಾಮಿ ಗ್ವಾನೆಲ್ಲರನ್ನು ಸ್ಫೂರ್ತಿಗೊಳಿಸಿದವರಲ್ಲೊಬ್ಬರು.

ಧರ್ಮಗುರುಗಳು ಅವರನ್ನು ಸ್ವಾಗತಿಸಿದರು. ಕ್ರಿ.ಶ. 1842ರಲ್ಲಿ ರಸಾಯನಿಕ ಗೊಬ್ಬರಗಳಿಗೆ ಸ್ವಾಮ್ಯ ದೊರೆತ ವರ್ಷವಾಗಿದ್ದು, ಇದು ಆಹಾರ ಧಾನ್ಯಗಳ ಕೃಷಿ ಕ್ಷೇತ್ರದಲ್ಲಿ ಜಾಗತಿಕ ಬದಲಾವಣೆಗೆ ದಾರಿಮಾಡಿ ಕೊಟ್ಟಿತು. ಅಲೋಷಿಯಸ್ ಗ್ವಾನೆಲ್ಲರವರು ಈ ಕ್ಷೇತ್ರದಲ್ಲಿ ಗಾಢವಾದ ಆಸಕ್ತಿ ತಳೆದರು, ತಗ್ಗು ಪ್ರದೇಶಗಳ ತೇವಾಂಶ ನಿವಾರಿಸಿ, ನೂತನ ಮಾದರಿ ಮತ್ತು ಅನ್ವೇಷಣೆಗಳನ್ನು ಉಪಯೋಗಿಸಿಕೊಂಡು ಕೃಷಿಯ ವಸಾಹತುಗಳನ್ನೇ ಆರಂಭಿಸಿದರು. ಕೃಷಿ ಸಂಬಂಧಿತ ಅಧ್ಯಯನದಿಂದ ಅವರು ಅನೇಕ ಕೆಲಸಗಳನ್ನು ಸೃಷ್ಟಿಸಿ, ಅಂಗವಿಕಲ ಯುವಜನರಿಗೂ ಉದ್ಯೋಗಾವಕಾಶ ನೀಡಿದರು. ಕೃಷಿ ಪರಿಣಿತರ ತಾಂತ್ರಿಕ ಆಡಳಿತದ ಅಡಿಯಲ್ಲಿ ಪುನರ್–ಸ್ಥಾಪನೆಯ ಮಟ್ಟಕ್ಕೆ 'ಸೊಂದ್ರಿಯೊ' ಪ್ರಾಂತ್ಯದಲ್ಲಿಯ ಒಲೋನಿಯೊ ಸಂತ ಸಲ್ವಾತೊರೆ ಎಂಬ ಗ್ರಾಮದಲ್ಲಿ ಇದನ್ನು ಅನುಷ್ಠಾನ ಗೊಳಿಸಿದರು. ಸಾಮಾಜಿಕ ನೆರವಿನ ಕ್ಷೇತ್ರದಲ್ಲಿ ಸಮಾನತೆಯ ತತ್ವವು ತಲೆ ಎತ್ತಲಾರಂಭಿಸಲು ಪ್ರಥಮ ಸರ್ವೇ ಕಾರ್ಯವನ್ನು ಕೈಗೊಳ್ಳಲಾಯಿತು. ಇವು ಸಮಾಜದಲ್ಲಿ ಅತ್ಯಧಿಕ ಬಡ ಜನರ ಅಸ್ತಿತ್ವವನ್ನು ತೋರಿಸಿಕೊಟ್ಟವು. ಈ ಬಗ್ಗೆ ಜಾಗೃತರಾದ ಗುರು ಅಲೋಷಿಯಸ್‌ರವರು 'ರೊಟ್ಟಿ


ಮತ್ತು ದೇವರು' ಎಂದು ತಾವೇ ಹೇಳಿದಂತೆ ಅಂತಹ ಜನಗಳಿಗೆ ಮನೆ ಮತ್ತು ಸೌಲಭ್ಯ ಒದಗಿಸಲು ತಮ್ಮ ಇಡೀ ಜೀವನ ಮತ್ತು ಚಟುವಟಿಕೆಗಳನ್ನು ಅರ್ಪಣೆ ಮಾಡಿದರು. ತಂದೆ ದೇವರ ಬಗ್ಗೆ ಅವರಿಗಿದ್ದ ಅಪಾರ ಪ್ರೀತಿಯ ಶಕ್ತಿಯಿಂದಾಗಿ ಈ ಸೇವಾಕಾರ್ಯ ಪ್ರಾರಂಭಿಸಲ್ಪಟ್ಟಿತು. ಕ್ರೈಸ್ತನ 'ನ್ಯಾಯದ ನೈಜ ಸೂರ್ಯ'ನ (*Opere, III, 486*) ಪ್ರತಿರೂಪದಂತೆ ಮತ್ತು ಕೊಡುಗೆ ತಾಯಿ ಮೇರಿ ಮಾತೆಯವರ ಪ್ರಾರ್ಥನೆಯಲ್ಲಿ ಕೆಲಸವನ್ನು ಕೈಗೊಳ್ಳಲಾಯಿತು.



ವಂದನೀಯ ಡಾನ್ ಜಾನ್ ಬೋಸ್ಕೋ

1842ರ ಅವಧಿಯ ಆಗಮನ ಮತ್ತು ನಿರ್ಗಮನ :ಈ ಭೂಮಿಗೆ ಸಾಂತ್ವನ ಹೇಳಲೋ ಎಂಬಂತೆ ಜೊಸೆಫೆ ಬೆನೆದೆತೋ ಕೊತ್ತೊಲೆಂಗೊ ಅವರು (ಏಪ್ರಿಲ್ 30 ರಂದು) ನಿಧನರಾಗಲು, ಅಲೋಷಿಯಸ್ ಅಂತೋನಿಯೋ ಗ್ವಾನೆಲ್ಲರವರು ಜನ್ಮತಾಳಿದರು. ಒಂದೇ ಸಂವತ್ಸರದಲ್ಲಿ ಘಟಿಸಿದ ಈ ಸೂರ್ಯಾಸ್ತ ಮತ್ತು ಸೂರ್ಯೋದಯಗಳ ಅವಧಿಯ ವೇಳೆ ಟೂರಿನ್ ಪಟ್ಟಣದಲ್ಲಿ ಫಾ. ಜಾನ್ ಬೋಸ್ಕೊ ಎಂಬ ನೂತನ ಧರ್ಮಗುರುಗಳು ಸಂಕಟದ ಕೋಟೆಯನ್ನು ಪ್ರವೇಶಿಸಿ ಕೊತ್ತೊಲೆಂಗೊ ಅವರನ್ನು ಭೇಟಿಯಾದರು. ಈ ಮೂವರು ಪರಿಶುದ್ಧ ಪುರುಷರು, ಲೂಯಿಜಿ ಒರಿಯೋನೆ ಹಾಗೂ ಅನ್ನಿಬಲೆ ಡಿ ಫ್ರಾನ್ಸ್ ಅವರ ಜೊತೆಗೂಡಿ ಪ್ರಾಚೀನ ಗುರುಗಳೊಬ್ಬರ ಈ ಕೆಳಕಂಡ ಮಾತುಗಳನ್ನು ದೃಢಪಡಿಸಿದರು. 'ಈ ಪ್ರಪಂಚ ಒಂದು ವೃತ್ತ ಮತ್ತು ದೇವರು ಅದರ ಕೇಂದ್ರಬಿಂದು', ಅದರ ಸುತ್ತಳತೆಯು ಮಾನವರು ಬದುಕುವ ವಿಧಗಳು. ಪವಿತ್ರ ವ್ಯಕ್ತಿಗಳು ವೃತ್ತದ ಮಧ್ಯೆ ಇರುವ ದೇವರನ್ನು ಸಮೀಪಿಸಲೆಂದು ಅವರತ್ತ ನಡೆದಾಗ, ಅದೇ ಸಂದರ್ಭದಲ್ಲಿ ಅವರು ಒಬ್ಬರಿಗೊಬ್ಬರು ನಿಕಟವಾಗಿ ಎಲ್ಲರೂ ಒಟ್ಟಾಗಿ ದೇವರನ್ನು ಸಮೀಪಿಸುತ್ತಾರೆ. ದಾನ-ಧರ್ಮಗಳ ರೀತಿಯೇ ಇಂತಹದ್ದು' (*Dorotheus of Gaza, Instructions, VI, 78*)

ಸ್ವಾಮಿ ಡಾನ್ ಲೂಯಿಜಿ ಒರಿಯೋನೆ (ಬಲಕ್ಕೆ) ಸ್ವಾಮಿ ಅನ್ನಿಬಲೆ ದಿ ಪ್ರಾನ್ಸ ಅವರೊಡನೆ (1908)



# ತಾಯಿ-ತಂದೆಯರು




**ಗುರು ಅಲೋಷಿಯಸ್ ಗ್ವಾನೆಲ್ಲರವರ ತಾಯಿ ತಂದೆಯರು; ತಾಯಿ ಮರಿಯಾ ಬಿಯಾಂಕಿ ಮತ್ತು ತಂದೆ ಲೊರೆಂಝೊ ಗ್ವಾನೆಲ್ಲ.**

ತಮ್ಮ 18ನೇ ವಯಸ್ಸಿನಲ್ಲಿ ಮರಿಯಾ ಬಿಯಾಂಕಿ (1806–1879) 24 ವರ್ಷ ವಯಸ್ಸಿನ ಲೊರೆನ್ಝೊ ಗ್ವಾನೆಲ್ಲ (1800–1874) ಅವರನ್ನು ಮದುವೆಯಾದರು. ಅವರೊಂದು ಸರಳ ಸದೃಢವಾದ ಅಗಾಧ ಉದಾಹರಣೀಯವಾದ ಗುಡ್ಡಗಾಡು ಪ್ರದೇಶದ ಕುಟುಂಬವಾಗಿದ್ದರು. ಹದಿಮೂರು ಮಕ್ಕಳ ಆ ಕುಟುಂಬದಲ್ಲಿ ಅಲೋಷಿಯಸ್‌ರು 9ನೇ ಮಗುವಾಗಿ ಡಿಸೆಂಬರ್ 19ರಲ್ಲಿ ಬೀಳುತ್ತಿದ್ದ ಹಿಮಪಾತದ ಚಳಿ ರಾತ್ರಿಯಲ್ಲಿ ಜನಿಸಿದರು. 'ವಾಲ್ಕಿಯವೆನ್ನಾ' ಎನ್ನುವ ಆ ಗ್ರಾಮ 'ಪ್ರಚ್ಚಿಶಿಯೊ' ಎಂದೂ ಅನಿಸಿಕೊಂಡಿದ್ದು, ಕಾಂಪೋದೋಲ್ಚಿನೋ ಹೊರವಲಯದ ಚಿಕ್ಕ ಜಿಲ್ಲೆಯಾಗಿದ್ದು ಸ್ವಿಟ್ಜರ್‌ಲ್ಯಾಂಡಿಗೆ ಹೋಗುವ ಕಣಿವೆಯ ಮಾರ್ಗವಾಗಿತ್ತು. ಈ ಕಣಿವೆಯ ಪ್ರದೇಶವು 1859 ರವರೆಗೆ ಆಸ್ಟ್ರೀಯಾ ದೇಶಕ್ಕೆ ಸೇರಿದ್ದು, ಇದೇ ವರ್ಷದಲ್ಲಿ ಅಲೋಷಿಯಸ್ ತನ್ನ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಕೊಮೊದ ಗಾಲಿಯೊ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು.

ಪ್ರಚ್ಚಿಶಿಯೊ ಗ್ರಾಮವು ಸೊಗಸಾದ ಪರ್ವತಗಳಲ್ಲಿ ನೆಲೆಗೊಂಡಿದ್ದು, ಅಲ್ಲಿ ಉಕ್ಕುವ ಜಲ ಚಿಕ್ಕ ತೊರೆಯಾಗಿ, ತಮ್ಮ ಗ್ರಾಮಕ್ಕೆ ಅನುಕೂಲವಾಗುವಂತೆ ಹರಿಯುತ್ತ, ಕೆಳಗಿನ ಬಯಲು ಮತ್ತು ಹಿಮಪಾತಗಳಲ್ಲಿ ಸಾಗಿ ಮುಂದೆ ಕಣಿವೆಯಲ್ಲಿ ಸಣ್ಣ ನದಿಗಳಂತೆ ಹರಿಯುತ್ತದೆ. ಆ ಸಮಯದಲ್ಲಿ, ಬುಡಕಟ್ಟಿನವ



ಪ್ರಚ್ಚೆಶಿಯೊದ ಒಂದು ದೃಶ್ಯ

ರಾಗಿದ್ದರೂ, ದೊಡ್ಡ ಕುಟುಂಬಗಳ ಅನೇಕ ಜನರನ್ನು ಹೊಂದಿದ್ದು, ತಮ್ಮ ಬಡತನದಲ್ಲಿಯೂ ಜನಿಸುವ ಪ್ರತಿ ಮಗುವನ್ನೂ ದೇವರ ಆಶೀರ್ವಾದ ಎಂಬಂತೆ ಸ್ವಾಗತಿಸಲಾಗುತ್ತಿತ್ತು. ಈ ಪರ್ವತ ಪ್ರದೇಶದ ಜನರ ಗೌರವ ಹಾಗೂ ಅವರ ಕಠಿಣ ಶ್ರಮದೊಂದಿಗೆ ಅವರ ಮುಗ್ಧಭಕ್ತಿ ವಿಶಿಷ್ಟ ಗುರುತಾಗಿತ್ತು. ಈ ಭಾಗದ ಪ್ರದೇಶವನ್ನು 'ಸಂತರುಗಳ ಕಣಿವೆ' ಎಂದೇ ಕರೆಯಲಾಗುತ್ತಿತ್ತು. ದೇವಾಲಯಗಳು ಹಾಗೂ ಬಲಿಪೂಜಾ ಪೀಠಗಳು, ಶಿಲುಬೆ ಹಾದಿಗಳು ಮತ್ತು ಲೋಹ ಹಾಗೂ ಮರದ ಶಿಲುಬೆಗಳು ರಸ್ತೆ ಬದಿಗಳನ್ನು ಅಲಂಕರಿಸಿದ್ದು, ಮನೆಗಳ ಗೋಡೆಗಳಲ್ಲಿ ದೇವ ಮಾತೆಯ ಪವಿತ್ರ ಸ್ವರೂಪಗಳಿಂದ ಶೃಂಗಾರಗೊಂಡಿದ್ದು, ಅಲ್ಲಿಯ ಆಚರಣೆಗಳನ್ನು ಸ್ಮರಿಸುತ್ತಾ ಮುಂದುವರಿಸಲಾಗುತ್ತಿತ್ತು.



ಪ್ರಚ್ಚೆಶಿಯೊ - ಗುರು ಅಲೋಷಿಯಸ್‌ರು ಜನಿಸಿದ ಮನೆ

*ಗುರು ಅಲೋಷಿಯಸ್‌ರಿಗೆ ಅತಿ ಪ್ರಿಯವಾಗಿದ್ದ ವಲ್ತೆಲೀನ ಕಣಿವೆಗಳ ಪರ್ವತಗಳು*



ಸ್ಥಳೀಯ ಕುಟುಂಬಗಳಲ್ಲಿ ಬಡತನ ಹಾಗೂ ಕಠಿಣ ಶ್ರಮ ಸರ್ವೇಸಾಮಾನ್ಯವಾಗಿತ್ತು. ತಮ್ಮ ದಿನನಿತ್ಯದ ಬದುಕಿಗಾಗಿ ಅವರು ಕೃಷಿ ಹಾಗೂ ಜಾನುವಾರು ಅಥವಾ ಕುರಿಮೇಯಿಸುವುದನ್ನು ಅವಲಂಬಿಸಿದ್ದು, ಕಲ್ಲು ಮತ್ತು ಕಡಿದಾದ ಬಂಡೆ ನಡುವಿನ ಪುಟ್ಟ ಜಾಗಗಳಲ್ಲಿ ಬೆಳೆ ಬೆಳೆಯುತ್ತಿದ್ದರು; ಕನಿಷ್ಠ ಮಟ್ಟದ ಉತ್ತಮ ಬದುಕು ಕಣಿವೆಯಲ್ಲಿ ಜರುಗಿಸುವ ಸಣ್ಣಪುಟ್ಟ ವ್ಯಾಪಾರದಿಂದ ಕೂಡಿತ್ತು. ಆ ಕಣಿವೆ ಇಟಲಿ ಮತ್ತು ಸ್ವಿಟ್ಜರ್‌ಲ್ಯಾಂಡ್‌ಗಳನ್ನು ಸಂಪರ್ಕಿಸುವ ಮಾರ್ಗವಾಗಿತ್ತು. ಅವರಲ್ಲಿ ಅಧಿಕ ಧೈರ್ಯವಂತ ಕುಟುಂಬಗಳು ದೂರದಲ್ಲಿಯ ಅಮೆರಿಕಾಗೆ ವಲಸೆ ಹೋಗುತ್ತಿದ್ದದ್ದು ಗುರು ಅಲೋಷಿಯಸ್‌ರ ಕಾಲದಲ್ಲೂ ಅಸ್ತಿತ್ವದಲ್ಲಿತ್ತು.

*ಕಾಂಪೋದೋಲ್ಜಿನೊ ಧರ್ಮಕೇಂದ್ರದ ದೇವಾಲಯ*



ಗ್ವಾನೆಲ್ಲ ಕುಟುಂಬವು ಶ್ರೀಮಂತರಲ್ಲವಾದರೂ ಮೂಲಭೂತ ಸೌಕರ್ಯಗಳ ಕೊರತೆಯಿಲ್ಲದೆ, ಬಡವರೊಂದಿಗೆ ತಮ್ಮಲ್ಲಿರುವುದನ್ನು ಹಂಚಿಕೊಳ್ಳುವ ಮನಸ್ಸುಳ್ಳವರಾಗಿದ್ದರು. ಆ ಇಡೀ ಕಣಿವೆಗೆ ಇದೊಂದು ಉಲ್ಲೇಖನೀಯ ಅಂಶವಾಗಿತ್ತು. ಕಾರಣ; ಗುರು ಗ್ವಾನೆಲ್ಲರ ತಂದೆ ಲೊರೆನ್ಝೊ (ಅವರಿಗಿಂತ ಹಿಂದೆ, ಅವರ ಅಜ್ಜ ತೊಮಾಸೊ) ಇವರೆಲ್ಲ ಅಲ್ಲಿಯ ಪೌರಾಡಳಿತಕ್ಕೆ ಜವಾಬ್ದಾರರಾಗಿದ್ದರು. ಹೀಗೆ ಆ ಕುಟುಂಬಕ್ಕೆ ಬಡಜನತೆಗೆ ನೆರವು ನೀಡುವಂತಹ ಅನೇಕ ಅವಕಾಶಗಳಿದ್ದವು. ಗುರು ಗ್ವಾನೆಲ್ಲರ ತಾಯಿ ಮರಿಯ ಸಾಮರ್ಥ್ಯಶಾಲಿ ಹಾಗೂ ಕಷ್ಟಗಳಿಗೆ ಸ್ಪಂದಿಸುವವರೂ ಆಗಿದ್ದು, ತನ್ನ ಮಕ್ಕಳಿಗೆ ಸಮರ್ಥ ಶಿಕ್ಷಕಿಯೂ ಆಗಿದ್ದರು; ಅವರು



ಎಲ್ಲರಿಗೂ ಭರವಸೆಯ ಆದರ್ಶ ನೀಡುವಲ್ಲಿ ತನ್ನ ದೈನಂದಿನ ಕೆಲಸ ಅಥವಾ ಕರ್ತವ್ಯದಲ್ಲಿ ಹಿಂಜರಿಯುತ್ತಿರಲಿಲ್ಲ. ತನ್ನ ಕುಟುಂಬದೊಳಗೆ ಅಲೋಷಿಯಸರು ತನ್ನ ತಾಯಿ ತಂದೆಯರನ್ನು 'ದೇವರ ದೃಷ್ಟಿಯಲ್ಲಿ ಹಿರಿಯ ಪಿತಾಮಹರು' ಎಂದೇ ಉಲ್ಲೇಖಿಸುತ್ತಿದ್ದರು. ತಮ್ಮ ಬರವಣಿಗೆಗಳಲ್ಲಿ 1885 ರ ಸೆಪ್ಟೆಂಬರ್‌ನಲ್ಲಿ ಉಂಟಾದ ಪ್ರವಾಹವು ತಾರ್ತನೊ ಹಾಗೂ ತಲವೋನಾಗಳ ನಡುವಿನ ವಲ್ತೆಲೀನ ಪ್ರದೇಶಗಳನ್ನು ಅನಿರೀಕ್ಷಿತವಾಗಿ ಹಾನಿಗೊಳಿಸಿ, ಪರ್ವತದ ಭಾಗಗಳೇ ಕೊಚ್ಚಿಹೋಗಿ ಮನೆಗಳನ್ನು ಹಾಗೂ ಜನರನ್ನು ಭೂಮಿಯ ಬಿರುಕುಗಳು ಗಬಳಿಸಿಕೊಂಡ ದುರಂತ ಘಟನೆಗಳನ್ನು ನೆನಪಿಸಿಕೊಂಡಿದ್ದಾರೆ. ಇಂತಹ ದುರಂತಗಳು, ಸಂಕಷ್ಟದಲ್ಲಿರುವ ಜನರನ್ನು ರಕ್ಷಿಸುವ ಮಾರ್ಗಗಳನ್ನು ಕಂಡುಕೊಳ್ಳಲು, ಅವರಿಗೆ ಪಾಠ ಕಲಿಸಿದವು. (1908) ರಲ್ಲಿ ಮೆಸ್ಸಿನಾದಿಂದ ಹಾಗೂ (1915) ರಲ್ಲಿ ಮಾರ್ಸಿಕದಲ್ಲಿ ಘಟಿಸಿದ ಭೂಕಂಪಗಳು ಅಲೋಷಿಯಸ್‌ರಲ್ಲಿ ವಿಶಾಲ ದೃಷ್ಟಿಯುಂಟುಮಾಡಿದ್ದಲ್ಲದೆ ಇಂತಹವನ್ನು ಗೆಲ್ಲುವ ಸ್ಥೈರ್ಯ ಮೂಡಿಸಿದ್ದವು; 'ರಾಜಕೀಯಕ್ಕೆ ತನ್ನದೇ ಆದ ಅಗತ್ಯಗಳಿದ್ದರೂ, ತುರ್ತು ಹಾಗೂ ದುರಾದೃಷ್ಟಗಳ ಪರಿಸ್ಥಿಯಲ್ಲಿ ಮಾನವೀಯತೆಯ ಕೋಮಲ ಭಾವವು ಭಿನ್ನಾಭಿಪ್ರಾಯ ಹಾಗೂ ವ್ಯಕ್ತಿಗಳನ್ನೂ ಮೀರಿ ನಡೆದು ಧರ್ಮಗುರು ವರ್ಗವನ್ನು ರಾಷ್ಟ್ರದ ಜೊತೆ ಐಕ್ಯಗೊಳಿಸುತ್ತವೆ.' (*Opere, III, 838*).

*ಕಾಂಪೋದೋಲ್ಚಿನೊ ಧರ್ಮಕೇಂದ್ರ ದೇವಾಲಯದ ದೀಕ್ಷಾಸ್ನಾನದ ತೊಟ್ಟಿ; ಹೊಸದಾಗಿ ಜನಿಸಿದ ಶಿಶು ಅಲೋಷಿಯಸ್‌ರಿಗೆ 20 ಡಿಸೆಂಬರ್ 1842 ರಂದು ಈ ಜಾಗದಲ್ಲಿ ದೀಕ್ಷಾಸ್ನಾನ ನೀಡಲಾಯಿತು.*



# ಯಾಜಕತ್ವಕ್ಕೆ ದೈವಕರೆ



***ಸಹೋದರಿ ಕ್ಯಾಥರೀನ ಗ್ವಾನೆಲ್ಲರವರ ಭಾವಚಿತ್ರ***

ಆದರ್ಶ ಜೀವನ ಹಾಗೂ ದಾನ-ಧರ್ಮಗಳಿಗೆ ಉದಾಹರಣೆಯಂತಿದ್ದ ತನ್ನ ಕುಟುಂಬದವರಿಂದ ಅಲೋಷಿಯಸ್ ಗಾಢವಾಗಿ ಪ್ರಭಾವಿತರಾಗಿದ್ದರು. ಜೊತೆಗೆ ಉದಾಹರಣೀಯವಾದ ಧಾರ್ಮಿಕ ಜೀವನ ಸಾಗಿಸಿದ ತಮ್ಮ ಸಹೋದರಿ ಕ್ಯಾಥರೀನ (1841–1891) ರಿಂದಲೂ ಅವರು ಪ್ರೇರಣೆಗೊಂಡಿದ್ದರು. ಅವರು ಮಾಡುವ ಕಾರ್ಯದಲ್ಲಿ ಆಕೆ ಆಪ್ತಳು, ನಿಕಟವರ್ತಿಯೂ ಆಗಿದ್ದರು. ತಮ್ಮ ಪಾವಿತ್ರತೆಯ ಖ್ಯಾತಿಯಲ್ಲೇ ಆಕೆ ನಿಧನ ಹೊಂದಿದ್ದರು. ಈ ಕುಟುಂಬದ ಹಿನ್ನೆಲೆಯು ಎಷ್ಟು ಬಲವಾದ ಸಾಕ್ಷ್ಯ ಹೊಂದಿತ್ತೆಂದರೆ, ಧಾರ್ಮಿಕ ಸಮುದಾಯಗಳ ಒಬ್ಬ ಸ್ಥಾಪಕರಾಗಿ ತಮ್ಮ ಅತಿಥಿಗಳಿಗೆ ಒದಗಿಸಬೇಕಾದ ಪರಿಸರಕ್ಕಾಗಿ ಅವರು ಈ ಮುನ್ನೋಟವನ್ನು ತಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಸಿಕೊಂಡಿದ್ದರು. ಅವರು 'ನೈಜ ಕೌಟುಂಬಿಕ ಹುರುಪು ಹಾಗೂ ವಾತ್ಸಲ್ಯಗಳಿಂದ ಆವರಿಸಿಕೊಂಡಿದ್ದರು.' ದೇವರ ಹುರುಪು ಅವರ ಹೃದಯವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು, ಆ ಬಾಲಕ ಒಬ್ಬ ಧರ್ಮಗುರುವಾಗುವುದನ್ನು ತೀರ್ಮಾನಿಸಿದುದರ ಆ ಘಳಿಗೆಯನ್ನು ಇತಿಹಾಸ ದಾಖಲಿಸಲಿಲ್ಲ. ಜೊತೆಗೆ ಅವರ ಜೀವನ ಚರಿತ್ರೆ ರಚಿಸಿದವರೂ, ತಾವೊಂದು ನಿಗೂಢತೆಯೊಂದಿಗೆ



***ಪ್ರಚ್ಚಿಶಿಯೋ ಗ್ವಾನೆಲ್ಲಾರವರ ಕುಟುಂಬ, ಪುಟ್ಟ ಅಲೋಷಿಯಸ್ ಮತ್ತು ಕ್ಯಾಥರೀನ್ ಬಡವರಿಗೆ ಗಂಜಿ ಮಾಡುವ ಆಟದ ದೃಶ್ಯ***



ಗ್ವಲ್ದೇರ

ತಮ್ಮ ಪ್ರಥಮ ಪರಮ ಪ್ರಸಾದ ಸ್ವೀಕರಿಸಿದ ನಂತರ ಬಾಲಕ ಅಲೋಷಿಯಸ್ ಈ ಮೋತೋ ದೆಲ್ ವೆಂತೋ ಬೆಟ್ಟವನ್ನು ಹತ್ತಿ ಧ್ಯಾನಾಸಕ್ತರಾಗುತ್ತಿದ್ದರು.

ವ್ಯವಹರಿಸುತ್ತಿರುವೆವು ಎಂಬುದನ್ನು ಮರೆತಂತೆ ಘಟನೆಗಳು ಮತ್ತು ವಾಕ್ಯಗಳನ್ನು ಜೋಡಿಸುವಲ್ಲಿ ಕಾಲ್ಪನಿಕ ಭಾವವನ್ನು ಅನುಸರಿಸಿದ್ದಾರೆ. ಅನಾಥರಿಗೆ ನೆರವು ನೀಡಲು ಆರಿಸಿದ್ದ ಸೇವಾಕಾರ್ಯವು ಹಾಗೂ ಅನೇಕ ಸಂಗತಿಗಳು ಅವರ ಪ್ರೇರಣೆಯಾಗಬಹುದು; ಅದು ಮನೆಯಲ್ಲಿಯ ಪ್ರತಿ ರಾತ್ರಿ ಜಪಸರ ಪ್ರಾರ್ಥನೆ; ತಾನು ಮತ್ತು ತನ್ನ ಅಕ್ಕ ಕ್ಯಾಥರೀನ ಆಟವಾಡುತ್ತ, ಬಡವರಿಗೆಂದು ಗಂಜಿ ಸಿದ್ಧಪಡಿಸಿದ್ದು; ಒಬ್ಬ ವಯಸ್ಸಾದ ಮುದುಕ ಕಾಂಪೋದೋಲ್ಚಿನೊ ದೇವಾಲಯದ ಬಾಗಿಲಿನ ಮುಂದೆ ಗ್ವಾನೆಲ್ಲಾರವರ ಕೈಯಲ್ಲಿದ್ದ ಸಿಹಿಗಾಗಿ ಅವರು ತಮ್ಮ ಕರಗಳನ್ನು ಚಾಚಿದರು. ಆದರೆ ಸಿಹಿಯನ್ನು ಸ್ವೀಕರಿಸುವ ಮುನ್ನವೇ ಮರೆಯಾದರು. 'ಕುರಿಗಳನ್ನು ಮೇಯಿಸುತ್ತ' ಪರ್ವತಗಳಲ್ಲಿ ನಿಶಬ್ಧವಾಗಿ ಕಳೆದ ದೀರ್ಘ ಅವಧಿಗಳು; ಧರ್ಮಗುರುವಾಗಿದ್ದ ಅವರ ಮಾವನ ಬುದ್ಧಿಮಾತು; ಹಾಗೂ ಗ್ವಲ್ದೇರ ಎಂಬಲ್ಲಿ ತಾವು ಪರಮ ಪ್ರಸಾದ ಸ್ವೀಕರಿಸಿದ ಪ್ರಥಮ ದಿನ (8 ಏಪ್ರಿಲ್ 1852). ಅವರಿಗೆ ಯೇಸುವಿನೊಂದಿಗಾದ ಅನುಭವ. ಆ ಕ್ಷಣದಲ್ಲಿ ತಾವು ಕುಳಿತಿದ್ದ 'ಮೊತೋ ದೆಲ್ ವೆಂತೋ' ಎಂಬ ಬಂಡೆಯ ಮೇಲೆ ಅವರು ತಲ್ಲೀನತೆ ಹೊಂದಿದ್ದು ಗಾಢವಾಗಿ ದೈವದರ್ಶನದಲ್ಲೋ ಅಥವ ಕನಸಿನಲ್ಲೋ ನಮಗೆ ತಿಳಿದಿಲ್ಲ. ಅವರ ಹೃದಯದ ಕಣ್ಣುಗಳು ಆ ಸುಂದರ ದಿವ್ಯ ಮಾತೆಯನ್ನು ಕಾಣುತ್ತಿರಲು, ಆಕೆ ಇವರು ಕಾಪಾಡಬೇಕಾದ ಅನಾಥ ಬಡವರ ಜನಸ್ತೋಮವನ್ನು ಅವರಿಗೆ ತೋರಿಸಿದರು.

ಈ ಬಗ್ಗೆ ನಮಗಾರಿಗೂ ಆ ಸಮಯ ಅಥವಾ ಸ್ಥಳದ ಬಗ್ಗೆ ಅವಶ್ಯಕತೆಯಿಲ್ಲ; ದೇವರು ಕರೆಯುತ್ತಾರೆ, ಅದುವೇ ಸತ್ಯ ಸಂಪೂರ್ಣತೆ.



ಗೊಲ್ದೇರ

ಬಾಲಕ ಅಲೋಷಿಯಸ್‌ರು ಕಂಡ ಮಾತೆ ಮರಿಯಮ್ಮ ದರ್ಶನ

12ನೇ ವಯಸ್ಸಿನಲ್ಲಿ ಬಾಲಕ ಅಲೋಷಿಯಸ್ ಗ್ವಾನೆಲ್ಲರನ್ನು, ಕೊಮೊನಲ್ಲಿ ಸೊಮಾಸ್ಕನ್ ಧರ್ಮಗುರುಗಳು ನಿರ್ವಹಿಸುತ್ತಿದ್ದ, ಗ್ಯಾಲಿಯೋ ಕಾಲೇಜಿನಲ್ಲಿ ಸೇರಿಸಲಾಯಿತು. ಆ ನಂತರ, ಅವರು ಅಲ್ಲಿಯ ಕ್ಯಾಥೋಲಿಕ್ ಧರ್ಮಕ್ಷೇತ್ರಕ್ಕೆ ಸೇರಿದ ಗುರುಮಠದಲ್ಲಿ ಸೇರಿ 1866 ರ ವರೆಗೂ ಅಲ್ಲೇ ವ್ಯಾಸಂಗ ಕೈಗೊಂಡ ಅಲೋಷಿಯಸ್‌ರವರಿಗೆ ಗುರು ತರಬೇತಿ ಪಡೆಯುವವರ ನಲವತ್ತು ಸಹಾಯಧನ ಸ್ಥಾನಗಳಲ್ಲಿ ಒಂದನ್ನು ನೀಡಲಾಗಿದ್ದು, ಅಲ್ಲಿ ವಿದ್ಯೆಯ ಅಧ್ಯಯನಕ್ಕೆ ಕಡಿಮೆ ಖರ್ಚು ತಗಲುತ್ತಿದ್ದು, ಹಾಗೂ ಅವರುಗಳಿಗೆ ಸರಳ ಊಟ ಒದಗಿಸುತ್ತಿದ್ದರು. ಅಲ್ಲಿ ಅವರ ನಡವಳಿಕೆ ಅತ್ಯುತ್ತಮವಾಗಿದ್ದು, ತಮಗೆ ಊಟ–ತಿಂಡಿಯ ಬಗ್ಗೆ ಚಿಂತೆಯೇ ಇರಲಿಲ್ಲ. ಅವರಿಗೆ ಅಲ್ಲಿನ ಒಂದು ನಿರ್ದಿಷ್ಟ ಶಿಸ್ತಿನ ಚೌಕಟ್ಟಿಗೆ ಹೊಂದಿಕೊಂಡು ಹೋಗಲು ಸ್ವಲ್ಪ ಕಷ್ಟವಾಗಿತ್ತು. ಅದು ವ್ಯಕ್ತಿತ್ವ ಬೆಳವಣಿಗೆಗೆ ತನ್ನದೇ ಕೊಡುಗೆ ನೀಡುತ್ತಿತ್ತಾದರೂ ಅನಿಶ್ಚಿತತೆಗಳಿಂದ ಕೂಡಿತ್ತು. ಗ್ಯಾಲಿಯೋ ಕಾಲೇಜಿನಲ್ಲಿ ತಾವು ವಿದ್ಯಾರ್ಥಿಗಳ ಮುಖ್ಯಸ್ಥನಾಗಿದ್ದುದರಿಂದ ಕಿರಿಯರ ಮೇಲೆ ಆ ಕಟ್ಟುನಿಟ್ಟಿನ ಶಿಸ್ತನ್ನು ಹೇರಲು ಬಯಸಲಿಲ್ಲ. ಯುದ್ಧದ ಮುನ್ಸೂಚನೆ ವಾತಾವರಣವು ಗಾಳಿಯಲ್ಲಿ ತೇಲಾಡುತ್ತಿದ್ದ ಪರಿಸ್ಥಿತಿ ಇನ್ನಷ್ಟು ದುರ್ಬರವಾಯಿತು. ಅವರು ವ್ಯಾಸಂಗ ಮಾಡುತ್ತಿದ್ದ ಗುರುಮಠದ ಕಟ್ಟಡವನ್ನು 1859 ರಲ್ಲಿ ಕೋಮೊದ



ಕೊಮೊ :

ಗ್ವಾಲಿಯೋ ಕಾಲೇಜಿನ ಮುಂಭಾಗ

ಪುರಸಭೆಯು ಆಕ್ರಮಿಸಿಕೊಂಡು, ಪಿಯೆಡ್‌ಮಂಟ್ ಮತ್ತು ಆಸ್ಟ್ರಿಯಾಗಳ ನಡುವಿನ ಯುದ್ಧದ ವೇಳೆ ಅದನ್ನು ಸೈನ್ಯದ ಆಸ್ಪತ್ರೆಯನ್ನಾಗಿ ಉಪಯೋಗಿಸಿಕೊಳ್ಳಲಾಯಿತು. ಅದರಲ್ಲಿ ಗಾರಿಬಾಲ್ಡಿಯು ಸನ್ ಫೆರ್ಮೊ ಯುದ್ಧದ ವಿಜಯ ಮಾಲೆ ಧರಿಸಿದರು.

ಒಬ್ಬ ವಿದ್ಯಾರ್ಥಿಯಾಗಿ ಅಲೋಷಿಯಸ್‌ರು ಕಠಿಣವಾಗಿ ದುಡಿಯುತ್ತ, ತಮ್ಮ ಶ್ರಮ, ಶಿಸ್ತು ಮತ್ತು ನೈತಿಕ ಜೀವನದಿಂದ ಇತಿಹಾಸ ಹಾಗೂ ಭೂಗೋಳದ ವಿಷಯಗಳಲ್ಲಿ ಅತ್ಯುತ್ತಮವಾಗಿ ಸ್ಥಾನ ಗಳಿಸಿದರು. 1885–1887 ರ ಅವಧಿಯಲ್ಲಿ ಅವರು ಬರೆದ ಇತಿಹಾಸ ಗ್ರಂಥದಲ್ಲಿ ಈ ತೀವ್ರ ಆಸಕ್ತಿಯನ್ನು 'ಆದಾಮ' ರಿಂದ ಪ್ರಾರಂಭಿಸಿ ವಿಶ್ವಗುರು 9ನೇಯ ಭಕ್ತಿನಾಥರು ಹಾಗೂ 13ನೇ ಲಿಯೋ ಅವರ ಕಾಲದ ಸಂಪೂರ್ಣ ಇತಿಹಾಸದ ಎಳೆಗಳನ್ನೂ ದಾಖಲಿಸಿರುವುದನ್ನು ಉಲ್ಲೇಖಿಸಬಹುದಾಗಿದೆ.

ಗುರು ನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ವರ್ಷಗಳ ಕಾಲದಲ್ಲೇ ಅವರು ದಾನ–ಧರ್ಮ ಹಾಗೂ ಸೇವೆಗಳ ಬಗೆಗಿನ ಒಲವು ಅವರ ಹೃದಯದಲ್ಲಿ ಅರಳುತ್ತಿತ್ತು; ಇದಕ್ಕೆ ರುಜುವಾತಾಗಿ, ಅಲೋಷಿಯಸ್‌ರು ಸಾಂಕ್ರಾಮಿಕ ರೋಗದಿಂದ ಬದುಕಿನ ಅಂತ್ಯಘಟ್ಟವನ್ನು ತಲುಪಿದ್ದ ತಮ್ಮ ಒಬ್ಬ ಗೆಳೆಯನ ಪಕ್ಕದಲ್ಲಿದ್ದು ಅವರಿಗೆ ಸೇವೆ ಸಲ್ಲಿಸುತ್ತಿದ್ದುನ್ನು ಸ್ವತಃ ನೋಡಿದವರಿದ್ದಾರೆ. ಆ ರೋಗಿಯ ಶುಶ್ರೂಷೆಯ ಬಗ್ಗೆ 'ಹಗಲೂ–ರಾತ್ರಿ .... ತಮ್ಮ ಸ್ವಂತ ತಾಯಿಗಿಂತಲೂ ಹೆಚ್ಚಿನ ಸೇವೆಯನ್ನು ಆತನಿಗೆ ಒದಗಿಸಿದರು' ಎನ್ನಲಾಗಿದೆ. (*L. Mazzucchi, La Vita, lo Spirito e le opera di don Luigi Guanella, 19*). ಇಂತಹ ಸೇವೆಗಳ ಜೊತೆಗೆ, ಧರ್ಮ ಹಾಗೂ ಸುವಾರ್ತೆ ಪ್ರಸಾರದ ಅವರ ಆಸೆ ತೀವ್ರಗೊಂಡಿತ್ತು. ಮೊತ್ತ ಮೊದಲ ಬಾರಿಗೆ, ತಮ್ಮನ್ನು ವಿದೇಶದಲ್ಲಿಯ ಸುವಾರ್ತಾ ಕಾರ್ಯಗಳಿಗೆ ಕಳುಹಿಸಿಕೊಡಬೇಕೆಂದು ಅವರು ಕೋರಿದ್ದನ್ನು ಅನೇಕ ವರ್ಷಗಳ ನಂತರ ಈ ಬಗ್ಗೆ ಕೊಮೊದ ಧರ್ಮಾಧ್ಯಕ್ಷರಾಗಿದ್ದ ಪಿಯತ್ರೊ ಕರ್ಸಾನ ಅವರಿಗೆ ನೆನಪಿಸಿದ್ದರು.

ಧರ್ಮಶಾಸ್ತ್ರದ ಗುರುವೊಬ್ಬರು ಒದಗಿಸಿದ ಆರ್ಥಿಕ ನೆರವಿನಿಂದ, ಗುರುತರಬೇತಿ ದಿನಗಳಲ್ಲಿ ಅವರನ್ನು ವಾಲ್ಟೆಲ್ಲಿನಲ್ಲಿರುವ (1865–1866) 'ಪ್ರೊಸ್ತೊ ದಿ ಪ್ಯೂರೊ' ಎಂಬಲ್ಲಿಗೆ ಕಳುಹಿಸಿ ಕೊಡಲಾಯಿತು. ಇಲ್ಲಿಯೇ ಅವರು ಶುಭ ಸಂದೇಶದ ಬಗ್ಗೆ ವಿವರಣೆ ನೀಡುವುದನ್ನು ಹಾಗೂ ಧರ್ಮೋಪದೇಶ ಬೋಧಿಸುವುದನ್ನು ಆರಂಭಿಸಿದರು. ಫ್ರಾಚ್ಚಿಶಿಯೋದಲ್ಲಿಯ ತಮ್ಮ ಮನೆ ತಲುಪಲು ಅವರು 20 ಕಿಲೋ ಮೀಟರ್ ದೂರದ ದಾರಿಯನ್ನು ಕಾಲ್ನಡಿಗೆಯಲ್ಲೇ ಬಂದು, ಸಂಜೆ ತೀರ ತಡವಾಗಿ ಮನೆ ಸೇರಿದಾಗ, ಕುಟುಂಬದ ಯಾರಿಗೂ ತೊಂದರೆಯಾಗದಿರಲೆಂದು ಮನೆ ಹೊರಗಿನ ಹುಲ್ಲುಮೆದೆಯಲ್ಲೇ ನಿದ್ರಿಸುತ್ತಿದ್ದರು.



***ಕೋಮೊ :***

***ಅಲೋಷಿಯಸ್‌ರು 1854 ರಲ್ಲಿ ಪ್ರವೇಶಿಸಿದ ಗಾಲಿಯೊ ಕಾಲೇಜಿನ ಮುಖ್ಯ ದ್ವಾರ***

***ಪ್ರೋಸ್ತೊ :***

***ಸ್ವಾಮಿ ಅಲೋಷಿಯಸ್‌ರು ತಮ್ಮ ಪ್ರಥಮ ಬಲಿಪೂಜೆ ಆಚರಿಸಿದ ಅಸುಂತ ಮಾತೆಯ ದೇವಾಲಯ***




# ಪರ್ವತಗಳಲ್ಲಿಯ ಶುಭ ಸಂದೇಶ ಪ್ರಚಾರಕರು

'ಪವಿತ್ರ ಸೇವಾವೃತ್ತಿಯಲ್ಲಿ ನಾನೊಬ್ಬ 'ಅಗ್ನಿಯ ಅಸ್ತ್ರ'ವಾಗಲು ಬಯಸುತ್ತೇನೆ'. ಈ ನಿರ್ಣಯದೊಂದಿಗೆ, ದಿನಾಂಕ 26 ಮೇ 1866 ರಂದು ಇತರೆ ಹತ್ತು ಮಂದಿ ವಯಸ್ಕ ತರುಣರೊಂದಿಗೆ ಕೋಮೊದಲ್ಲಿಯ ಧರ್ಮಾಧ್ಯಕ್ಷರ ನಿವಾಸದ ಬಲಿಪೀಠದ ಪುಟ್ಟ ದೇವಾಲಯದ ಬಲಿಪೀಠದ ಮುಂದೆ ಧರ್ಮಾಧ್ಯಕ್ಷರಾದ ಬೆರ್ನಾದೀನೊ ಮರಿಯಾ ಫ್ರಾಸ್‌ಕೊಲ್ಲಾದಿ ಫೋಜಾ (1811–1869) ಅವರಿಂದ ಅಲೋಷಿಯಸ್‌ರು ಯಾಜಕ ದೀಕ್ಷೆಯನ್ನು ಸ್ವೀಕರಿಸಿದರು. ಈ ಹಿಂದೆ ಅಲ್ಲಿಯ ನಾಗರಿಕ ಅಧಿಕಾರಿಗಳ ಜೊತೆ ಉಂಟಾದ ಭಿನ್ನಾಭಿಪ್ರಾಯಗಳ ಕಾರಣ ಈ ಧರ್ಮಾಧ್ಯಕ್ಷರನ್ನು ಕೋಮೊನಲ್ಲಿ ಗೃಹಬಂಧನದಲ್ಲಿ ಇರಿಸಲಾಗಿತ್ತು.

ಪರಮ ಪ್ರಸಾದದ ಹಬ್ಬದ ಮಹೋತ್ಸವದಂದು ಪ್ರೋಸ್ತೊದಲ್ಲಿಯ ಕಾಲೇಜಿನ ಸಂತ ಮರಿಯ ಅಸುಂತ ದೇವಾಲಯದಲ್ಲಿ (ಮೇ 31) ತಮ್ಮ ಪ್ರಥಮ ಬಲಿಪೂಜೆಯನ್ನು ಅರ್ಪಿಸಿದರು. ತಮ್ಮ ಧರ್ಮಗುರುವಿನ ಕಾರ್ಯವು ಸೇವೆ ಮತ್ತು ಶಿಕ್ಷಣಗಳ ಹೆಸರಿನಲ್ಲಿ ಪ್ರಾರಂಭಿಸಿದರು; ಅವರು ಬಡ ರೋಗಿಗಳನ್ನು ಭೇಟಿ ಮಾಡುತ್ತಾ ಅವರಿಗೆ ವಾತ್ಸಲ್ಯ ಹಾಗೂ ಸಹಾಯ ತೋರಿದ್ದಲ್ಲದೇ, ಯುವಜನ ಹಾಗೂ ವಯಸ್ಕರಿಗೆ ಸಂಜೆ ತರಗತಿಗಳನ್ನು ಆಯೋಜಿಸಿ ಶಿಕ್ಷಣ ನೀಡಲಾರಂಭಿಸಿದರು. ಅವರ ಈ ರೀತಿಯ ದಣಿವಿಲ್ಲದ ಚಟುವಟಿಕೆಗಳು 'ಕೆಲಸದ ಮೇಲೆ ಕೆಲಸ' ಅಲ್ಲಿಯ ಧರ್ಮಕೇಂದ್ರದ ಗುರುವಿಗೂ ಹಾಗೂ ಮರ್ಸೋನಿಕ್ ನಾಗರಿಕ ವರ್ಗಕ್ಕೂ ಸಮಸ್ಯೆಯಾಗಿ ಪರಿಗಣಿಸಿತು. 1872 ರಲ್ಲಿ ವಂದಿತ ಗುರು ಅಲೋಷಿಯಸ್‌ರು ತಮ್ಮ ಮುಕ್ತ



ಪ್ರೋಸ್ತೊ : ಅಸುಂತ ಮಾತೆ ದೇವಾಲಯದ ಒಂದು ನೋಟ



ಸವೋನ್ಯೊ ಪ್ರದೇಶದ ಒಂದು ನೋಟ

ಅಭಿಪ್ರಾಯಗಳನ್ನು(*Saggio di ammonimenti famigliari per tutti ma più particolarmente per il popolo di campagna*) ರಲ್ಲಿ ಮೇಲಿನ ಅಧಿಕಾರಿವರ್ಗದ ನಡವಳಿಕೆಯನ್ನು ಖಂಡಿಸುವುದಲ್ಲದೆ, ವಿರೋಧಿಸಿದರು. ತಮ್ಮ ಈ ಮೊದಲ ಪ್ರಕಟಿತ ಬರವಣಿಗೆಗಳ ಮೂಲಕ 'ಸಾಮಾನ್ಯ ಜನರ ಕ್ರೈಸ್ತ ಧರ್ಮ ಹಾಗೂ ತತ್ವಗಳು ತುಂಬಿದ ಹೃದಯಗಳನ್ನು ದಿಕ್ಕುತಪ್ಪಿಸುವ' ಮುಕ್ತತನದ ಒತ್ತಡಗಳಿಗೆ ಮಣಿಯ ಬಾರದೆಂದು ಸಮರ್ಥವಾಗಿ ವಾದಿಸಿದರು.

ಹೀಗೆ ಅವರ ಸೇವಾಕಾರ್ಯದ ಮೊದಲ ಹಂತ ಕಠಿಣವಾಗಿತ್ತು. ವಿಶೇಷವಾಗಿ ಇದು, ಸಮುದ್ರ ಮಟ್ಟಕ್ಕಿಂತ ಒಂದು ಸಾವಿರ ಮೀಟರಿನಷ್ಟು ಎತ್ತರದ ನಾನೂರು ನಿವಾಸಿಗಳ ಗ್ರಾಮವಾದ ಸವೊನ್ಯೊ ಎಂಬಲ್ಲಿ 1867 ರಿಂದ 1875 ರ ಅವಧಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಸಂಭವಿಸಿತು. ಈ ಗ್ರಾಮವನ್ನು ತಲುಪಬೇಕಾದರೆ ಇದ್ದ ಒಂದು ಮಾರ್ಗವೆಂದರೆ ಸುಮಾರು ಮೂರು ಸಾವಿರ ಮೆಟ್ಟಿಲುಗಳನ್ನೇರುವುದು ಅಥವಾ ಪರ್ವತದ ಹಾದಿಗಳಲ್ಲಿ ಸುತ್ತಿಬಳಸಿಕೊಂಡು ಬರುವುದು. ಇದೇ ಈ ಸಾಮಾಜಿಕ ಸಂತರ ಅನೇಕ ರೂಪಗಳನ್ನೊಳಗೊಂಡ ತೀವ್ರ ಚಟುವಟಿಕೆಗಳ ಏಳು ವರ್ಷಗಳ ವಿಶಿಷ್ಟತೆಯಾಗಿದೆ. ಗುರು ಅಲೋಷಿಯಸ್‌ರು ಶ್ರಮಿಕರಲ್ಲಿ ಶ್ರಮಿಕರಾದರು; ಒಬ್ಬ ಕೈಗೆಲಸದ ಕೂಲಿಯಾಳಾಗಿ, ಅಲ್ಲಿಯ ದೇವಾಲಯವನ್ನು ಇನ್ನಷ್ಟು ವಿಶಾಲವಾಗಿಸಲು ನೆರವಾಗಿ, ಭದ್ರತಾ ಗೋಡೆಯೊಂದನ್ನು ನಿರ್ಮಿಸುವುದರ ಮೂಲಕ ಆ ಗ್ರಾಮದ ಚೌಕವನ್ನು ಭದ್ರಪಡಿಸಿದರು. ತಮ್ಮ ಧರ್ಮಕೇಂದ್ರದ ನಿವಾಸವನ್ನು ನವೀಕರಿಸಿ ಅಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಲು ಯತ್ನಿಸಿದಾಗ ಅವರು ತೊಂದರೆಗಳಲ್ಲಿ ಸಿಲುಕಿದರು. ವಿದ್ಯೆ ಒದಗಿಸುವ ಪ್ರಾಮುಖ್ಯತೆ ಬಗ್ಗೆ ಒತ್ತಿ ಹೇಳುತ್ತ, ಅದು ಕೇವಲ ಶಿಕ್ಷಣ ಸಂಸ್ಥೆ ಮಾತ್ರವಲ್ಲ 'ಶ್ರಮಪಡುವ ಪ್ರಜೆಗಳನ್ನು ಹಾಗೂ ಅನುಕರಣೀಯ ಕ್ರೈಸ್ತರನ್ನು' ರೂಪಿಸುವ ಕಾರ್ಯವನ್ನು ಸರ್ಕಾರ ಮತ್ತು ಕುಟುಂಬಗಳು ವಹಿಸಿಕೊಟ್ಟಿರುವ ಅನುಭವ ವ್ಯಕ್ತಿಯೊಂದಿಗೆ ಬೆಳೆಸಿಕೊಳ್ಳುವ ಸಂಬಂಧವಾಗಿದೆ. (*Opere, III, 593*) 'ಮಕ್ಕಳು ಅರಿವನ್ನು ಬಯಸುತ್ತಾರೆ' ಎಂದು ಅವರಿಗೆ ಗೊತ್ತಿದ್ದು, ಶಾಲೆಯೇ ಅವರಲ್ಲಿ

ತಮ್ಮ ಮೊದಲ ಬಲಿಪೂಜೆ (*1866*) ಅರ್ಪಿಸಿದ ವೇಳೆಯ ಗುರು ಗ್ವಾನೆಲ್ಲರ ಒಂದು ಭಾವಚಿತ್ರ



ಆದರ್ಶ ಹಾಗೂ, ಸೂಕ್ತ ಮಾನಸಿಕ ಮನೋಭಾವವನ್ನು ಸೃಷ್ಟಿಸುತ್ತವೆ ಎಂದು ಅರಿತಿದ್ದರು. ವಂದಿತ ಗುರು ಅಲೋಷಿಯಸ್‌ರ ಪ್ರಕಾರ ಒಂದು ಉತ್ತಮ ಸಮಾಜ, ಉತ್ತಮ ಶಾಲೆಗಳಿಂದ ನಿರ್ಮಾಣಗೊಳ್ಳುತ್ತದೆ. ಲೇಬ್‌ನೀಟ್ಸ್ ಎಂಬುವವರ ಹೇಳಿಕೆಯನ್ನು ಉಲ್ಲೇಖಿಸುತ್ತ ಅವರು 'ನನ್ನ ಕೈಗಳಿಗೆ ಒಂದು ಶಾಲೆಯನ್ನು ನೀಡಿ, ನಿಮ್ಮ ನಿರೀಕ್ಷೆಯಂತೆ ಉನ್ನತ ಶಿಕ್ಷಣ ಹೊಂದಿದ ಅಥವಾ ನಾಗರೀಕ ಸಮಾಜವನ್ನು ನಿಮಗೆ ಹಿಂತಿರುಗಿ ನೀಡುತ್ತೇನೆ' (*Opere, IV 1039*) ಎಂದು ಹೇಳುತ್ತಿದ್ದರು. ಕಟ್ಟಕಡೆಗೆ ಶಾಲೆ ಎಂಬುದು 'ಸಮಾಜಕ್ಕೆ ಜೀವ ಒದಗಿಸುವ ಅಥವ ಮರಣ ಸೂಚಿಸುವ ಸಂಗತಿ' (*La Divina Provvidenza, 1893, 81*) ಎನ್ನಲಾಗಿದೆ. ಬರೀ ಹೊಸ ಪೀಳಿಗೆಗಳಿಗೆ ಮಾತ್ರ ಶಿಕ್ಷಣ ನೀಡುವ ಬಗ್ಗೆ ವಂದಿತ ಗುರು ಗ್ವಾನೆಲ್ಲರವರಿಗೆ ತೃಪ್ತಿಯಾಗುತ್ತಿರಲಿಲ್ಲ; ಹಗಲು ವೇಳೆ ಹಾಗೂ ಸಂಜೆಯ ಸಮಯಗಳಲ್ಲಿ, ವಾರದ ದಿನಗಳಲ್ಲಿ ಮತ್ತು ಹಬ್ಬದ ದಿನಗಳಲ್ಲೂ ಅವರು ವಯಸ್ಕರಿಗೆ ಪಾಠ-ಪ್ರವಚನ ಶಿಕ್ಷಣ ಒದಗಿಸುತ್ತಿದ್ದರು. ಮಸೋನಿಕ್ ವ್ಯವಸ್ಥೆಯ ಶಾಲೆ, ಪುಸ್ತಕಗಳು ಹಾಗೂ ಸಂಸ್ಥೆಗಳನ್ನು ಕಥೋಲಿಕ್ ಶಾಲೆಗಳು, ಪುಸ್ತಕಗಳು ಹಾಗೂ ಸಂಸ್ಥೆಗಳಿಂದ ವಿರೋಧ ಪ್ರಕಟಿಸಲು (*Opere, III, 69*) ಹೆಚ್ಚಿನ ಧೈರ್ಯವನ್ನು ತೋರಬೇಕೆಂದು ಅವರಿಗೆ ಮನದಟ್ಟಾಗಿತ್ತು. ತಾವು ವಾಸಿಸುತ್ತಿದ್ದ ಸವೊನ್ಯೊ ಗ್ರಾಮದ ನಿವಾಸಿಗಳ ಶಾರೀರಿಕ ಆರೋಗ್ಯದ ಬಗ್ಗೆಯೂ ಅವರು ಕಾಳಜಿ ವಹಿಸಿದ್ದರು: ಆ ನಿಟ್ಟಿನಲ್ಲಿ ತೊರೆಯಿಂದ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಕೈಗೊಂಡರು; ಶುಚಿತ್ವ ಮತ್ತು ಆರೋಗ್ಯದ ಬಗೆಗಿನ ಕೆಲ ಕಠಿಣ ಸಂಗತಿಗಳನ್ನು ನಿವಾರಿಸಬೇಕೆಂದರೆ, ಹಾಗೂ ಹೊಸ ಶಿಸ್ತನ್ನು ಅಳವಡಿಸಬೇಕೆಂದರೆ, ಒಂದು ಸಮಾಧಿ ಸ್ಥಳದ ಅಗತ್ಯವಿದೆ ಎಂಬುದರ ಬಗ್ಗೆ ಅವರಿಗೆ ಮನದಟ್ಟಾಗಿತ್ತು; ಸಾಮುದಾಯಿಕ ಬಟ್ಟೆ ಶುಚಿಗೊಳಿಸುವ ವಿಶಾಲ ಜಾಗ ಸೂಕ್ತ ರಕ್ಷಣೆಯಿಲ್ಲದೆ ಹೆಪ್ಪುಗಟ್ಟುವ ಚಳಿ ಹಾಗೂ ತೀಕ್ಷ್ಣವಾದ ಬಿಸಿಲಿನಿಂದ ಹೆಂಗಸರು ತೊಂದರೆಗೊಳಗಾಗುತ್ತಿರುವುದರ ವಿಷಯ ತಮ್ಮ ಗಮನಕ್ಕೆ ಬಂದಾಗ, ಅದನ್ನು ನಿವಾರಿಸಲು ಆ ಸ್ಥಳದ ಮೇಲೆ ಒಂದು ಛಾವಣಿ ನಿರ್ಮಿಸಿ, ಸುತ್ತಮುತ್ತ ಗೋಡೆಯನ್ನು ಕಟ್ಟಿಸಿದರು.



**ಸವೊನ್ಯೊ**

**ಗುರು ಅಲೋಷಿಯಸ್‌ರು ನೆಲೆಸಿದ್ದ ಧರ್ಮಕೇಂದ್ರದ ನಿಲಯ; ಶಾಲಾ ತರಗತಿಗಳಿಗಾಗಿ ಅವರು ಅದನ್ನು ಮರು-ವಿನ್ಯಾಸಗೊಳಿಸಿದರು.**

ಒಬ್ಬ ಧರ್ಮಗುರುವಾಗಿ ಅವರು ತಮ್ಮ ವೈಯಕ್ತಿಕ ಪ್ರಾರ್ಥನಾ ಸ್ಥಳದಿಂದ ಗ್ರಾಮದ ಚೌಕದ ಬಳಿಗೆ ಧಾವಿಸುತ್ತ ಜನರ ಅಗತ್ಯಗಳಿಗೆ ಸ್ಪಂದಿಸುತ್ತಿದ್ದರೆ ಹೊರತು, ದೇವಾಲಯದ ಪೂಜಾ ವಿಧಿಗಳಲ್ಲೇ ತಮ್ಮನ್ನು ಬಂಧಿಸಿಕೊಂಡಿರುತ್ತಿರಲಿಲ್ಲ. ಬೀದಿಯಲ್ಲಿ ಕೆಲವು ಜನರೊಂದಿಗೆ ಸಂವಾದಿಸುತ್ತಾ; ರೋಗಿಗಳ ಮನೆಗಳನ್ನು ಸಂಧಿಸಿ ಸಾಂತ್ವನ ಹೇಳುವರು; ತಮ್ಮ ನೆರೆಹೊರೆಯ ಕಣಿವೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಕುರಿಕಾಯುವ ಕುರುಬರನ್ನು ಸಂಧಿಸಲು ಕೆಲವು ಕಿಲೋಮೀಟರ್‌ಗಳಷ್ಟು ಹೋಗುತ್ತಿದ್ದರು, ಅವರಲ್ಲಿ ಸಂಕಷ್ಟಕ್ಕೊಳಗಾದವರನ್ನು ಹಾಗೂ ತೊಂದರೆಗೆ ಸಿಲುಕಿದವರನ್ನು ಭೇಟಿಮಾಡಿ ಸಮಾಧಾನ ಹೇಳುತ್ತಾ ಅವರ ನೋವುಗಳಲ್ಲಿ ತಾವೂ ಭಾಗಿಯಾಗುತ್ತಿದ್ದರು. ಬಡಜನರೊಂದಿಗೆ ನಿಕಟ ಸಂಪರ್ಕದಲ್ಲಿರಲು ಅವಕಾಶಗಳಿಗಾಗಿ ಕಾಯುತ್ತಿದ್ದರು. ಅವರ ಅಗತ್ಯಗಳನ್ನು ತಕ್ಕಮಟ್ಟಿಗೆ ಪೂರೈಸುತ್ತ, ಅವರ ಕರ್ತವ್ಯ ಪ್ರಜ್ಞೆಯ ಬಗ್ಗೆ ಅವರನ್ನು ಎಚ್ಚರಿಸುತ್ತಿದ್ದರು. 'ಮನೋದೌರ್ಬಲ್ಯ'ಕ್ಕೊಳಗಾದ ಪುರುಷ ಹಾಗೂ ಮಹಿಳೆಯರನ್ನು ಕೈಬಿಡದೆ, ಅವರಿಗೆ ಸೂಕ್ತ ಮಾನಸಿಕ ಚಿಕಿತ್ಸೆ ಒದಗಿಸಲು ದಾರಿ ಹುಡುಕುತ್ತಿದ್ದರು; ತಾಯಿಯನ್ನು ಕಳೆದುಕೊಂಡಿದ್ದ ಒಬ್ಬಳು ಅಂಗವಿಕರ ಮುಗ್ಧ ಮನಸ್ಸಿನ ಹುಡುಗಿಗೆ ಆಶ್ರಯ ನೀಡಿದರು. ಆಕೆಯನ್ನು ಯಾವುದೇ ಆರೈಕೆಯ ಸಂಸ್ಥೆಗೆ ತೆರಳಲು ಬಿಡದೇ ತಾವೇ ಆಕೆಗೆ ಸಾಕುತಾಯಿ–ತಂದೆಯನ್ನು ಹುಡುಕಿ ಕೊಟ್ಟರು.

ಕರುಣೆ, ಅನುಕಂಪಗಳನ್ನು ಪ್ರೋತ್ಸಾಹಿಸುತ್ತಿದ್ದ ಈ ಪರ್ವತ ಪ್ರದೇಶದ ಶುಭಸಂದೇಶ ಪ್ರಸಾರಕರು, ಧಾರ್ಮಿಕ ಸಂಸ್ಕಾರಗಳಿಗೆ ಉತ್ತೇಜನ ನೀಡುತ್ತ ಅನೇಕ ಯುವಕ–ಯುವತಿಯರನ್ನು ಕೊತ್ತೊಲೆಂಗೊ ಹಾಗೂ ಡಾನ್ ಬೋಸ್ಕೊ ಧಾರ್ಮಿಕ ಸಭೆಗಳಿಗೆ ಕಳುಹಿಸಿಕೊಟ್ಟರು. ಇವೆಲ್ಲ ಸೇವೆಗಳ ಜೊತಗೆ ತಾವಿರುವ ಪ್ರದೇಶದಲ್ಲಿ ದೈವೀಕ ಸ್ವರೂಪಗಳನ್ನು ಕೆತ್ತಿಸಿ, ಅಲ್ಲಲ್ಲಿ ಬಲಿಪೀಠಗಳ ಪುಟ್ಟ ಸಭಾಂಗಣಗಳನ್ನು ನಿರ್ಮಿಸುತ್ತ, ದಾರಿಹೋಕರ ಹೃದಯಗಳಲ್ಲೂ ಕಲ್ಲುಗಳಿಂದ ಮಾಡಿದ ಮೂರ್ತಿಗಳು ವಿಶ್ವಾಸದ ಭಾವನೆಗಳನ್ನು ಉಕ್ಕಿಸುವಂತೆ ಮಾಡಿದರು.



**ಸವೋನ್ಯೊ**

**ಬಟ್ಟೆ ಒಗೆಯುವ ಈ ಗೃಹಕ್ಕೆ ಸ್ವಾಮಿ ಅಲೋಷಿಯಸ್‌ರು ಮೇಲ್ಛಾವಣಿ ಕಟ್ಟಿಸಿ ರಕ್ಷಿಸಿದರು**

# ಡಾನ್–ಜಾನ್ ಬೋಸ್ಕೊ ಅವರೊಂದಿಗೆ


ತಮ್ಮ ಧರ್ಮಕೇಂದ್ರದ ಜನ ಗುರು ಗ್ವಾನೆಲ್ಲರನ್ನು ಮೆಚ್ಚಿಕೊಂಡಿದ್ದರು. ಕಾರಣ; ಅವರು ಸದಾ ದುರ್ಬಲರ ಪರವಾಗಿದ್ದರು. ಆ ಕಾಲದಲ್ಲಿ ಸವೋನ್ಯೊದಲ್ಲಿಯ ಕ್ರೈಸ್ತ ದೇವಾಲಯದ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವ ಕಾನೂನು ಜಾರಿಗೊಳಿಸಿದಾಗ ಅನೇಕ ಕುಟುಂಬಗಳು ತೀರ ಅನ್ಯಾಯದಿಂದ ತೊಂದರೆಗೊಳಗಾದರು. ಗುರು ಗ್ವಾನೆಲ್ಲರವರು ಈ ಮೊಕದ್ದಮೆಯನ್ನು ತಮ್ಮ ಕೈಗೆತ್ತಿಕೊಂಡು ಸರ್ಕಾರದ ಸಕಲ ಕಾನೂನು ಕಡತ ಹಾಗೂ ಕಾಯಿದೆಗಳನ್ನು ಪರಿಶೀಲಿಸಿ, ಅನ್ಯಾಯ, ಅಕ್ರಮಗಳನ್ನು ಬಹಿರಂಗಗೊಳಿಸಿ, 'ಸಂಬಂಧಪಟ್ಟ ಸರ್ಕಾರಿ ಇಲಾಖೆಯಿಂದ, ವಾರಸುದಾರರಿಗೆ ಆಸ್ತಿಗಳನ್ನು ಹಿಂತಿರುಗಿಸುವುದಲ್ಲದೆ ಸಂಬಂಧಪಟ್ಟ ತೆರಿಗೆ ಅಧಿಕಾರಿಯ ವಂಚನೆಯನ್ನು ಕಂಡುಹಿಡಿದರು ಹಾಗೂ ವರ್ಗಾವಣೆಗೊಳಿಸಿದರು' (*Le vie della Provvidenza, 45*) ಈ ಬಗ್ಗೆ ಏನೂ ಅರಿವಿರದಿದ್ದ ಸವೋನ್ಯೊದ ಪ್ರಜೆಗಳು, (ತಮ್ಮ ಹಕ್ಕುಗಳನ್ನು ರಕ್ಷಣೆ ಮಾಡುವ), ಗುರುಗಳ ಈ ಉತ್ತಮ ಕಾನೂನು ಕ್ರಮವನ್ನು ಮೆಚ್ಚಿಕೊಂಡರು.

ಅವರು ಈಗಾಗಲೇ ಅತಿ ಗೌರವಾನ್ವಿತರಾಗಿದ್ದರೂ, ತಮ್ಮ ಪ್ರೇಷಿತ ಕಾರ್ಯಕ್ಕಾಗಿ ಗುರು ಅಲೋಷಿಯಸ್‌ರು ವಿಶಾಲ ಕ್ಷೇತ್ರವನ್ನು ಬಯಸಿದರು. ಇದನ್ನು ಕಾರ್ಯರೂಪಕ್ಕಿಳಿಸಲು ಅವರು ಇತರ ಧರ್ಮಕೇಂದ್ರಗಳೊಂದಿಗೆ ಪತ್ರವ್ಯವಹಾರದ ಮೂಲಕ ವಿನಂತಿಸಿ ಅವರ ಸಹಕಾರ ಕೋರಿದರೂ, ಈ ಪ್ರಯತ್ನ ವ್ಯರ್ಥವಾಯಿತು. ಕ್ರಮೇಣವಾಗಿ 1871 ರಿಂದ, ಡಾನ್ ಜಾನ್ ಬೋಸ್ಕೋರವರು ನಿರ್ವಹಿಸುತ್ತಿದ್ದ ಶೈಕ್ಷಣಿಕ ಚಟುವಟಿಕೆ ಹಾಗೂ ಸಂಸ್ಥೆಗಳೊಡನೆ ತಾವೂ ಸಹಕರಿಸಲು ಆರಂಭಿಸಿದರು. ಈ ಹಿಂದೆ ಬೆರ್‌ಗವೊ ಎಂಬಲ್ಲಿ ಟೂರಿನ್ ಸಲೇಷಿಯನ್ ಧರ್ಮಗುರುವಾದ ಗುರು ಡಾನ್ ಬೋಸ್ಕೊ ಅವರು ಜರುಗಿಸಿದ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ತಮ್ಮ ಸಹಗುರು ಅಭ್ಯರ್ಥಿಗಳಿಂದ ತಿಳಿದುಕೊಂಡಿದ್ದರು.

ತಮ್ಮ ಕನಸಿನ ಯೋಜನೆಗಳನ್ನು ನನಸಾಗಿಸಲು ಗುರು ಗ್ವಾನೆಲ್ಲರವರು ಸ್ಥಳೀಯ ಅಧಿಕಾರಿ ಸಹಾಯದಿಂದ ಗುರು ಡಾನ್ ಬೋಸ್ಕೊರವರ ಸಲೇಷಿಯನ್ನರ ಸಹಕಾರದೊಂದಿಗೆ, ಕೋಮೋ ಪ್ರದೇಶದಲ್ಲಿ ಅವರ ಒಂದು ಸಂಸ್ಥೆಯನ್ನು ಆರಂಭಿಸಲು ಪ್ರಯತ್ನಿಸಿದರಾದರೂ, ಅದರಿಂದ 'ಯಾವುದೇ ಪರಿಣಾಮವಾಗಲಿಲ್ಲ. ಪ್ರಗಿತಪರವಾದಿಗಳು ಇದಕ್ಕೆ ಅಡ್ಡಿಯಾದರು' (*Ibid.,44*) ಎಂದು ನಿರಾಶೆ ವ್ಯಕ್ತಪಡಿಸಲಾಗಿದೆ.

***ಡಾನ್ ಬೋಸ್ಕೊ (1815-1888)***

*ಇವರು ಸ್ಯಾಲೇಷಿಯನ್ನರು ಹಾಗೂ ಕ್ರೈಸ್ತರ ಸಹಾಯದ ಮೇರಿ ಮಾತೆಯ ಪುತ್ರಿಯರು ಎಂಬ ಎರಡು ಧಾರ್ಮಿಕ ಸಭೆಗಳನ್ನು ಸ್ಥಾಪಿಸಿದರು. 1934ರಲ್ಲಿ ವಿಶ್ವಗುರು ಹನ್ನೊಂದನೆ ಭಕ್ತಿನಾಥರು ಇವರನ್ನು ಸಂತರ ಪಟ್ಟಕ್ಕೆ ಏರಿಸಿದರು.*



ಇಂತಹ ಪ್ರತಿಕೂಲ ಸನ್ನಿವೇಶಗಳು, ಗುರು ಗ್ವಾನೆಲ್ಲರವರನ್ನು ಡಾನ್ ಬೋಸ್ಕೊರವರ ಜೊತೆ ನಿಕಟವಾಗಿರಲು ಆಶಿಸಿದ ತಮ್ಮ ನಿರ್ಣಯದ ಮೇಲೆ ಬೆಳಕು ಚೆಲ್ಲಲು ಸಹಕಾರಿಯಾದವು. 'ತಮ್ಮ ಹುಟ್ಟಿನ ಆಲ್ಫ್ಸ ಪರ್ವತದಿಂದ ಹೊರತೆಗೆದ ಒಂದು ದೊಡ್ಡ ತುಂಡಿನಂತೆ, ಇದ್ದ ಅವರ ಮೂಲ ಸಂಪೂರ್ಣ ಪ್ರಮಾಣದ ಚಾರಿತ್ರ್ಯವನ್ನು' ಇದು ದೃಢಪಡಿಸಿದ್ದು, ತಮ್ಮ ಧರ್ಮಾಧ್ಯಕ್ಷರಾದ ಪೂಜ್ಯ ಕರ್ಸಾನ ಅವರ ಯಾವುದೇ ಆದೇಶ ಅಥವಾ ಅಡೆತಡೆ ಇದಕ್ಕೆ ಅಡ್ಡಿಯಾಗುತ್ತಿರಲಿಲ್ಲ. (P. Buzzetti, *Le Chiese nel territorio dell' Antica Communità di piuro, 1921, 131*) ಹೀಗೆ, ಗುರು ಅಲೋಷಿಯಸ್‌ರು, ಗುರು ಡಾನ್ ಬೋಸ್ಕೋ ಅವರು ತಮ್ಮಲ್ಲಿಗೆ ಕಳುಹಿಸಿದ್ದ ಗುರು ಮಿಕೇಲೇ ಸಾಲಾ ಅವರಿಗೆ ತಮ್ಮ ಧರ್ಮಕೇಂದ್ರದ ಜವಾಬ್ದಾರಿಗಳನ್ನು ವಹಿಸಿಕೊಂಡು ಸವೋನ್ಯೊದಿಂದ ತೆರಳಿದರು. ತಾವು ತಲುಪಬೇಕಾಗಿದ್ದ ಕ್ಯಾವೆನ್ನಾ ಸ್ಥಳದ ಮಾರ್ಗದ ಮಧ್ಯೆ, ತಮ್ಮ ಬೀಳ್ಕೊಡುಗೆಗಾಗಿ ಕೆಲವೊಂದು ಅವಸರದ ಆದರೆ ವಾತ್ಸಲ್ಯದ ವಿರಾಮಗಳನ್ನು ಕೈಗೊಂಡು, ಆ ನಂತರ ತಮ್ಮ ಗುರಿಯತ್ತ ಸಾಗಿದರು. ಹೀಗೆ ಅವರು 24ನೇ ಜನವರಿ ದಿನದಂದು ಅಲ್ಲಿಂದ ತೆರಳಿದರು. 1874 ರಲ್ಲಿ ಗುರು ಗ್ವಾನೆಲ್ಲ ಅವರ ತಂದೆ ಲೊರೆನ್ಝೊ ನಿಧನರಾಗಿ ಸರಿಯಾಗಿ ಒಂದು ವರ್ಷದ ನಂತರ, ಅನಿಶ್ಚಿತ ಭವಿಷ್ಯದೆಡೆಗೆ ಅವರ ಉಳಿದ ಆಯುಷ್ಯದ ಮೈಲಿಗಲ್ಲಾಗಲಿರುವ ತಮ್ಮ ಮುಂದಿನ ಪ್ರಯಾಣವನ್ನು ಕೈಗೊಂಡರು. ವಂದನೀಯ ಡಾನ್ ಬೋಸ್ಕೋರವರು ನಿರೀಕ್ಷಿಸುತ್ತಿದ್ದ ಶ್ರೇಷ್ಠ ಗುರು ಗ್ವಾನೆಲ್ಲರನ್ನು ಸ್ವಾಗತಿಸಿದರು. ಅವರ ಜೊತೆ ಸೇರಿ ತಾವು ಅರ್ಜೆಂಟೀನಾದಲ್ಲಿ ಆರಂಭಿಸಲು ಆಶಿಸಿದ್ದ ನೂತನ ಸೇವಾನಿಲಯುಗಳ ಬಗ್ಗೆ ಯೋಚಿಸುತ್ತಾ 'ನಾವು ಅಮೆರಿಕಾಗೆ ತೆರಳೋಣವೇ?' ಎಂದರು.



**ಟೂರಿನ್**

**ಕ್ರೈಸ್ತರ ಸಹಾಯದ ಮೇರಿ ಮಾತೆಯ ಮಹಾ ದೇವಾಲಯ**

ತ್ರಿನಿತ ದಿ ಮೊಂದೊವಿ
ಧರ್ಮಕೇಂದ್ರ ದೇವಾಲಯ



ಟೂರಿನ್‌ನಲ್ಲಿಯ ಮರಿಯಮ್ಮನವರ ಪುಣ್ಯಕ್ಷೇತ್ರ (Shrine of Mary, Help of Christians) ದಲ್ಲಿ ಸ್ವಾಮಿ ಗ್ರಾನೆಲ್ಲರವರು ಶುಭಸಂದೇಶ ಬೋಧಿಸಲು ತೊಡಗಿದಾಗ, ಅಲ್ಲಿ ಧರ್ಮೋಪದೇಶ ತರಗತಿಗಳನ್ನು ನಿರ್ವಹಿಸಲು ಹಾಗೂ ನಗರದ ಹೊರಭಾಗದ ಕೆಲವೊಂದು ಜನಪ್ರಿಯ ಸುವಾರ್ತಾ ಕಾರ್ಯವನ್ನು ಅವರಿಗೆ ವಹಿಸಿಕೊಡಲಾಯಿತು. ದಿನಾಂಕ 25 ಸೆಪ್ಟೆಂಬರ್ 1875 ರಂದು ತ್ರೈವಾರ್ಷಿಕ ಧಾರ್ಮಿಕ ಪ್ರಮಾಣಗಳೊಂದಿಗೆ ಅವರು ತಮ್ಮನ್ನು ಸಾಲೇಷಿಯನ್ ಸಭೆಯೊಂದಿಗೆ ಬಂಧಿಸಿಕೊಂಡರು. ಅವರು ಒರತೋರಿಯೊ ಸನ್ ಲೂಯಿಜಿಗ್ಗೆ (ಶಾಲಾ ಪ್ರಾರ್ಥನ ಮತ್ತು ಆಟದ ಕೊಠಡಿ) ಮಾರ್ಗದರ್ಶನ ನೀಡುತ್ತಾ ಪೋರ್ತನೋವದ ವಿವಿಧ ಶ್ರೀಸಾಮಾನ್ಯ ಜನರೊಂದಿಗೆ ಬೆರೆಯುವ ಅವಕಾಶ ಅವರಿಗೆ ದೊರೆಯಿತು. ಆ ನಂತರ ಸೈನ್ಯದಲ್ಲಿ ಸೇವೆ ಸಲ್ಲಿಸಿದ ಬಳಿಕ ವಯಸ್ಕ ವೃತ್ತಿಪರತೆಗಳನ್ನು ರೂಪಿಸುವ ಉದ್ದೇಶ ಹೊಂದಿದ್ದ 'ಕ್ರೈಸ್ತರ ನೆರವಿನ ಮರಿಯಳ ಪುತ್ರರ' (Sons of Mary, Help of Chrsitians) ಕೆಲಸದ ಜವಾಬ್ದಾರಿ ಅವರ ಹೆಗಲಿಗೇರಿತು. ಈ ಎಲ್ಲ ಕೆಲಸಗಳು ಗುರು ಅಲೋಷಿಯಸ್‌ರಿಗೆ ಅತ್ಯಂತ ತೃಪ್ತಿ ನೀಡಿದವು. ಈ ಫಲದಾಯಕ ಅನುಭವಗಳು ಮುಂದೆ ತಾವು ತಮ್ಮದೇ ಸಭೆಯನ್ನು ಸ್ಥಾಪಿಸಿದಾಗ ಅದರ ಪೂರ್ಣ ಪ್ರಯೋಜನ ಪಡೆದುಕೊಂಡರು. ಜನಸಾಮಾನ್ಯರೊಂದಿಗಿನ ಒಡನಾಟ ಒಂದು ಸಂಸ್ಥೆಗೆ ಒದಗಿಸುವ ಚೈತನ್ಯ ಶಕ್ತಿಯ ಬಗ್ಗೆ ಚೆನ್ನಾಗಿ ಅರಿತುಕೊಂಡ ಸ್ವಾಮಿ ಗ್ರಾನೆಲ್ಲ, ಮುಂದೆ ಕೆಲವೇ ದಿನಗಳಲ್ಲಿ ಸಹಕಾರಿಗಳ ಒಂದು ಅಂಗ ಸಭೆಯನ್ನು ಪ್ರಾರಂಭಿಸಿದರು.

ಒಂದು ವರ್ಷದ ನಂತರ, 'ತ್ರಿನಿತಾ ದಿ ಮೊಂದೋವಿ' ದಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಲು ಅವರನ್ನು ಕಳುಹಿಸಲಾಯಿತು. ಅಲ್ಲಿಯ



ತ್ರಿನಿತ ದಿ ಮೊಂದೊವಿ

ಸ್ವಾಮಿ ಅಲೋಷಿಯಸ್‌ರವರು ತಮ್ಮ ಶಿಕ್ಷಕರ ಡಿಪ್ಲೊಮ ಪದವಿ ಪಡೆದ ರೋಸಾ ಗೊವೊನೆ ಶಿಕ್ಷಕರ ತರಬೇತಿ ಸಂಸ್ಥೆ



ತ್ರಿನಿತ ದಿ ಮೊಂದೊವಿ
ರೈಲು ನಿಲ್ದಾಣ

ಪಾಲಕರಾದ ಧರ್ಮಾಧ್ಯಕ್ಷ ಅತಿ ಪೂಜ್ಯ ಪ್ಲಾಚಿದೋ ಪೋಟ್‌ಸಿಯವರೊಡನೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡರು. ಅನೇಕ ಸಂದರ್ಭಗಳಲ್ಲಿ ಆ ಧರ್ಮಾಧ್ಯಕ್ಷರಿಗೆ ಆತಿಥ್ಯ ಒದಗಿಸಿದಲ್ಲಿ ತಮ್ಮ ಸಭೆಯ ಮೊದಲ ಗುರು ಅಭ್ಯರ್ಥಿಗಳಿಗೆ ರೂಪಿಸುವ ಕಾರ್ಯವನ್ನು ಅವರಿಗೆ ವಹಿಸಿಕೊಟ್ಟರು. ಆ ಸಮಯದಲ್ಲೇ ಗುರು ಗ್ವಾನೆಲ್ಲ ಅವರು ಮೂರನೇ ಘಟ್ಟದ ಫ್ರಾನ್ಸಿಸ್ಕನ್ ಸನ್ಯಾಸಿಯಾದರು (19 ಮಾರ್ಚ್ 1877). ಇದರ ಜೊತೆಗೆ ತಮ್ಮ ಬೋಧನಾ ಶಾಸ್ತ್ರದ ಅಭ್ಯಾಸ ಪೂರೈಸಿ, 'ರೋಸಾ ಗೋವೊನೆ ಶಿಕ್ಷಕರ ಸಂಸ್ಥೆ'ಯಲ್ಲಿ ಒಬ್ಬ ಹೊರ ವಿದ್ಯಾರ್ಥಿಯಾಗಿ ಪರೀಕ್ಷೆ ಬರೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ತೇರ್ಗಡೆಯಾಗಿ ಮುಂದಿನ ವರ್ಷಗಳಲ್ಲಿ ಮೌಲ್ಯಯುತ ಗ್ರಂಥಗಳನ್ನು ರಚಿಸಿ ಪ್ರಕಟಿಸಿದರು. ಸಾಲೇಷಿಯನ್ ಸಭೆಯ ಅನೇಕ ವಿಶಿಷ್ಟ ವಿಧೇಯಕಗಳನ್ನು ರೂಪಿಸಿದ ಸಭೆಗಳಲ್ಲಿ ಹಾಗೂ ವಿಶೇಷವಾಗಿ ಆ ಸಭೆಯ ಪ್ರಥಮ ಸಾಮಾನ್ಯ ಸಭೆಯ (First General Chapter) ಸಮಾವೇಶ (ಸೆಪ್ಟೆಂಬರ್ 5 ರಿಂದ ಅಕ್ಟೋಬರ್ 5, 1877) ದಲ್ಲೂ ಭಾಗವಹಿಸಿದರು. ಜೊತೆಗೆ 1877 ರಲ್ಲಿ ಪ್ರಕಟಗೊಂಡ 'ಡಾನ್ ಬೋಸ್ಕೊ'ರ 'ಯುವ ಜನತೆಯ ಶಿಕ್ಷಣದಲ್ಲಿ ನಿವಾರಣಾ ವ್ಯವಸ್ಥೆ' (Preventive System in the education of youth) ಎಂಬ ಪತ್ಯ ರಚನೆಯ ಸಮಯದಲ್ಲಿ ಅವರೊಂದಿಗಿರುವ ಸೌಭಾಗ್ಯವೂ ದೊರೆತು, ಕೆಲವೊಂದು ವಿಭಿನ್ನ ಲಕ್ಷಣಗಳೊಂದಿಗೆ ಈ ಪತ್ಯವು ಸಾಲೇಷಿಯನ್ ಹಾಗೂ ಗ್ವಾನೇಲಿಯನ್ ಬೋಧನಾ ಅಂಶಗಳನ್ನು ಹೊಂದಿದೆ.



ಚೀಲೆ
ನಿವಾರಣೆಯ ನಿಜ ವ್ಯವಸ್ಥೆಯ ದಯೆಯೆನ್ನುವುದು (ಸ್ವಾಮಿ ಗ್ವಾನೆಲ್ಲ)

## ವಾಸಸ್ಥಳದ ಸಿದ್ಧತೆ

ಡಾನ್‌ಬೋಸ್ಕೊ ಅವರು ಗುರು ಗ್ವಾನೆಲ್ಲ ಅವರಿಗೆ ವಹಿಸಿಕೊಟ್ಟ ಕಾರ್ಯಗಳು ಬಹಳ ಪ್ರಮುಖವಾಗಿದ್ದರೂ ಸಲೇಷಿಯನ್ ಚಟುವಟಿಕೆ ತಾವು ತಮ್ಮ ಹೃದಯ ಹಾಗೂ ಮನಸ್ಸುಗಳಲ್ಲಿ ಯೋಜಿಸಿದ್ದ ಚಟುವಟಿಕೆಗಳೊಡನೆ ಸಂಪೂರ್ಣವಾಗಿ ಹೊಂದಾಣಿಕೆಯಾಗುತ್ತಿರಲಿಲ್ಲ, ಎಂಬುದನ್ನು ಗ್ವಾನೆಲ್ಲರವರು ಅರಿತುಕೊಂಡಿದ್ದರು. ಅವರಿಗೆ ತಮ್ಮ ಹಿಂದಿನ ಕೊತ್ತೊಲೆಂಗೊ ಹಾಗೂ ಡಾನ್‌ಬೋಸ್ಕೊ ಸಂಸ್ಥೆಗಳ ನಡುವೆ ಎಲ್ಲೋ ನಿಂತಿರುವಂತೆ ಭಾಸವಾಗತೊಡಗಿತು. ಅವರು ಕೊತ್ತೊಲೆಂಗೊ 'ತೀವ್ರ ನಿರ್ಗತಿಕ ಹಾಗೂ ನಿರಾಶ್ರಿತರ ಬಗ್ಗೆ ಆಕರ್ಷಿತರಾದರೂ, ಡಾನ್ ಬೋಸ್ಕೊ ಅವರ ಶೈಕ್ಷಣಿಕ ಕಾರ್ಯಗಳನ್ನೂ ಮೆಚ್ಚುತ್ತಿದ್ದರು. ಪ್ರಗತಿ ಪರವಾದಿಗಳನ್ನು ಎದುರಿಸಿದಲ್ಲದೆ ವಿಶ್ವಗುರು ಪೋಪ್ ಮತ್ತು ಧರ್ಮಸಭೆಗೆ ಅವರು ತೋರುತ್ತಿದ್ದ ಬೆಂಬಲ ಮತ್ತು ರಕ್ಷಣೆಯ ನಿಲುವುಗಳು, ಪತ್ರಿಕೆಗಳೂ ಸೇರಿದಂತೆ ಸಂಬಂಧಿತ ಅಧಿಕಾರಿ ವರ್ಗದಿಂದ ತೀವ್ರ ವಿರೋಧಕ್ಕೆ ಒಳಪಟ್ಟ ಸಮಯದಲ್ಲಿ, ಗುರು ಗ್ವಾನೆಲ್ಲ ಅವರು ಆಶ್ರಯ ಪಡೆಯಲು ಡಾನ್‌ಬೋಸ್ಕೊದತ್ತ ತಿರುಗಿರುವರೆಂದು ಕೆಲವು ಜನರು ಅಭಿಪ್ರಾಯಪಟ್ಟರು. ವಾಸ್ತವವಾಗಿ ಅವರು ಡಾನ್ ಬೋಸ್ಕೊರವರ ಜೊತೆಗಿದ್ದು ಕಲಿತ ಪಾಠಗಳು, ಮುಂದೆ ಅವರು ಅತ್ಯಂತ ಸಂಕಷ್ಟಕ್ಕೊಳಗಾದವರಿಗಾಗಿ ನಿರ್ವಹಿಸಿದ ದಿಟ್ಟತನ, ಅದ್ಭುತಕರ ಕಾರ್ಯಗಳಿಗೆ 'ವೃತ್ತಿ ತರಬೇತಿಯ ಅವಧಿ' ಎಂದು



ತ್ರವೋನ ಪ್ರದೇಶದ ಒಂದು ವಿಹಂಗಮ ನೋಟ



ತ್ರವೋನದಲ್ಲಿಯ ಗುರು ಅಲೋಷಿಯಸ್‌ರ ಮಲಗುವ ಕೋಣೆ

ಪರಿಗಣಿಸಲಾಗಿತ್ತು. ಅವರೇ ಹೇಳಿದಂತೆ, ಡಾನ್‌ಬೋಸ್ಕೊ ಸಂಸ್ಥೆಯೊಂದಿಗಿನ ಅವರ ಒಡನಾಟ 'ಸಿದ್ಧತೆಯ ವಾಸಸ್ಥಳವಾಗಿ' ಮಾರ್ಪಟ್ಟಿತ್ತು.

ಈ ಅವಧಿ ಅವರ ಮುಂದಿನ ಯೋಜನೆಗಳಿಗೆ ಉಪಯೋಗಕರವಾದ ಅನುಭವವಾದಂತಾಯಿತಲ್ಲದೆ, ನಿಧಾನಗತಿಯ, ಕಷ್ಟದಿಂದ ಗಳಿಸಿದ ಗ್ರಹಿಕಾ ಸಾಮರ್ಥ್ಯಕ್ಕೆ ಅವಕಾಶವೂ ಆಗಿದ್ದವು. ಇವೆಲ್ಲ ಅವರೇ ನಿವೇದಿಸಿಕೊಂಡಂತೆ, ದೌರ್ಬಲ್ಯದಿಂದಲ್ಲದೆ, 'ತಮಗೆಂದಿಗೂ ಹತ್ತಿರದ ಮಾರ್ಗ ಅಥವಾ ಹೆದರಿಕೆಯ ಸ್ವಭಾವ' ಇದ್ದಿರಲಿಲ್ಲ ಎಂದಿದ್ದಾರೆ, ಅದಕ್ಕೆ ಬದಲು, ದೇವರು ಅವರಿಗಾಗಿ ಸಿದ್ಧಪಡಿಸುತ್ತಿದ್ದ ಉಡುಗೊರೆಯ ಶ್ರೇಷ್ಠತೆಯನ್ನು ರುಜುವಾತುಗೊಳಿಸಿ, ಅತ್ಯಂತ ಸಂಕಷ್ಟಕ್ಕೊಳಗಾದ ಮಾನವ ವರ್ಗಕ್ಕೆ ಸ್ವಲ್ಪ ಹಿರಿದಾದ ನೆರವನ್ನೂ ಒದಗಿಸುವುದಾಗಿತ್ತು.



ತ್ರವೋನ

ಕಾನ್ವೆಂಟ್‌ನ ಉದ್ಯಾನ, ಧಾರ್ಮಿಕ ಸಭೆಯನ್ನು ಸ್ಥಾಪಿಸುವ ತಮ್ಮ ಮೊದಲ ಪ್ರಯತ್ನದಲ್ಲಿ ಗುರು ಗ್ವಾನೆಲ್ಲರವರು ಇಲ್ಲಿ ಒಂದು ಶಾಲೆಯನ್ನು ಆರಂಭಿಸಿದರು.



ಪಿಯಾನೆಲ್ಲೊ ಲಾರಿಯೊದಲ್ಲಿನ ಧರ್ಮಕೇಂದ್ರದ ದೇವಾಲಯ

ಕ್ರಿ.ಶ. 1878 ರ ಸೆಪ್ಟೆಂಬರ್ ತಿಂಗಳಲ್ಲಿ ಅವರನ್ನು ಧರ್ಮಾಧ್ಯಕ್ಷ ಪಿಯೆತ್ರೊ ಕರ್ಸಾನ, ಅವರ ಧರ್ಮಕ್ಷೇತ್ರಕ್ಕೆ ಮತ್ತೆ ಕರೆಸಿಕೊಂಡು, ತ್ರವೋನ ಎಂಬಲ್ಲಿಗೆ ಸಹಾಯಕ ಧರ್ಮಕೇಂದ್ರದ ಗುರುಗಳಾಗಿ ನಿಯೋಜಿಸಲು, ಅಲ್ಲಿ ಅವರು ಸಾಲೇಷಿಯನ್ನರ ರೀತಿಯಲ್ಲೇ ಜನರಿಗಾಗಿ ಶಾಲೆಯೊಂದನ್ನು ಸ್ಥಾಪಿಸಿದರು. ಶೀಘ್ರದಲ್ಲೇ, ಹಣದ ಕೊರತೆ ಹಾಗೂ ಆಗಿನ ರಾಜಕೀಯ ವಿರೋಧಗಳ ಕಾರಣ ಆ ಶಾಲೆಯನ್ನು ಮುಚ್ಚಲಾಯಿತು.

ಅಲ್ಪಾವಧಿಗಾಗಿ ಅವರನ್ನು ಆಲ್ಫ್ ಪರ್ವತ ಶ್ರೇಣಿಯ 'ಓಲ್ಮೊ' ಎಂಬಲ್ಲಿಗೆ ಗಡಿಪಾರುಮಾಡಲಾಯಿತು. ಅವರ ವಿಶ್ವಾಸವು ಕಠಿಣವಾಗಿ ಸಂಕಷ್ಟಕ್ಕೊಳಗಾದಾಗ, ಅವರ ಏಕೈಕ ಸಾಂತ್ವನವಾಗಿದ್ದುದು, ತಂದೆಯಾದ ಪಿತದೇವರು. ಆ ಸ್ಥಳದಲ್ಲಿ ಅವರು ಅನೇಕ ಸಂಕಷ್ಟಗಳನ್ನು ತಮ್ಮ ಕಹಿಯಾದ ಏಕಾಂತತೆಯ ಶೋಧನೆಗಳನ್ನು ಅನುಭವಿಸಿದರೂ ಅದಕ್ಕೆ ಸೋಲಲಿಲ್ಲ. ಅಲ್ಲಿ ದೇವರು 'ಬುದ್ಧಿವಂತ ಕುಶಲಕಾರ್ಮಿಕನ ಉಳಿಯಂತೆ' (*Opere, IV, 1269*) ಪಿಯನೆಲ್ಲೊ ಲಾರಿಯೊಗೆ ತೆರಳಲಿದ್ದ ವ್ಯಕ್ತಿಯನ್ನು ಸಂಪೂರ್ಣವಾಗಿ ಸಿದ್ಧಪಡಿಸಿದರು. ಅವರ 'ಘಳಿಗೆ' ಆಗಮಿಸಿತ್ತು.



ಪಿಯಾನೆಲ್ಲೊ ಲಾರಿಯೊ ಒಂದು ವಿಹಂಗಮ ನೋಟ

# ಸೇವಾಕಾರ್ಯಗಳ ಉಗಮ



ಪಿಯಾನೆಲ್ಲೋ ಲಾರಿಯೊ ಸ್ವಾಮಿ ಕಾರ್ಲೊ ಕೊಪ್ಪಿನಿ ಅವರು ಸ್ಥಾಪಿಸಿದ ಆರೋಗ್ಯ ತಾಣ

**ಕೋ**ಮೊ ಸರೋವರದ ಬಳಿಯ ಪಿಯನೆಲ್ಲೊ ಲಾರಿಯೊ ಧರ್ಮಕೇಂದ್ರ, ಧರ್ಮಗುರುವಿಲ್ಲದೆ ಖಾಲಿ ಉಳಿದುದ್ದರ ಕಾರಣ, ಗುರು ಗ್ವಾನೆಲ್ಲ ಅದರ ಕಾರ್ಯ ನಿರ್ವಹಿಸಲು ಮಾತ್ರ ಒಪ್ಪಿಕೊಂಡರು. ಆದರೆ, ಅಧಿಕ ನಿಯಂತ್ರಣಕ್ಕೊಳಪಡುವ ಧರ್ಮಕೇಂದ್ರ ಗುರುವಾಗಿ ನೇಮಕಗೊಳ್ಳಲು ಅವರು ಸಮ್ಮತಿಸಲಿಲ್ಲ. ಆ ಧರ್ಮಕೇಂದ್ರದ ಧರ್ಮಗುರುವಾಗಿದ್ದ ಗುರು ಕಾರ್ಲೊ ಕೊಪ್ಪಿನಿ (1827–1881) ಅವರ ನಿಧನರಾಗಿ ಕೆಲವು ತಿಂಗಳುಗಳ ನಂತರ 1881 ರ ನವೆಂಬರ್‌ನಲ್ಲಿ ಗುರು ಗ್ವಾನೆಲ್ಲ ಅಲ್ಲಿಗೆ ಆಗಮಿಸಿದರು. ಹರೆಯದ ತರುಣರಾಗಿದ್ದ, ಗುರು ಕೊಪ್ಪಿನಿ ಅವರು ಮಸೀನಿಯ ಕಾರ್ಯದರ್ಶಿಯಾಗಿದ್ದುಕೊಂಡೇ 'ಪವಿತ್ರ ಐಕ್ಯತೆಯ ನಿಷ್ಕಳಂಕ ಮರಿಯಮ್ಮನ ಪುತ್ರಿಯರು' (1871) 'Pious Union of the Daughters of Mary Immaculate' ಎಂಬ ಕನ್ಯಾಸ್ತ್ರೀ ಸಭೆಯನ್ನು ಸ್ಥಾಪಿಸಿದ್ದು, 1872ರಲ್ಲಿ, ಹತ್ತಿರದಲ್ಲೇ ಇದ್ದ ಹೊರವಲಯದ ಕಮ್ಲಾಗೊ ಜಿಲ್ಲೆಯಲ್ಲಿ ನಾಲ್ವರು ಹರೆಯದ ಹೆಣ್ಣುಮಕ್ಕಳನ್ನೊಳಗೊಂಡ ಕನ್ಯಾಸ್ತ್ರೀ 'ಗೃಹ'ವೊಂದನ್ನು ಸ್ಥಾಪಿಸಿದರು: ಮರ್ಚಲ್ಲಿನ ಮತ್ತು ದೀನ (ಕ್ಲೇರ್), ಬೊಸಾತ್ತಾ ಮತ್ತು ಎಲಿಸಬೆತ್ತ ಹಾಗೂ ಮದ್ದಲೇನ ಮಿನಾತ್ತ ಆಗಿದ್ದರು. 28 ಜೂನ್ 1878 ರಲ್ಲಿ ಈ ಹೆಣ್ಣು ಮಕ್ಕಳು ತಮ್ಮನ್ನೇ ದೇವರಿಗಾಗಿ ಅರ್ಪಿಸಿ, ಆ 'ನಿಲಯ' ದಲ್ಲಿದ್ದ ಪುಟ್ಟ ಅನಾಥ ಹೆಣ್ಣುಮಕ್ಕಳ ಆರೈಕೆ ಮಾಡುತ್ತಾ, ಆ ಹಳ್ಳಿಯಲ್ಲಿಯ ರೋಗಿಗಳಿಗೆ ಸೂಕ್ತ ವೈದ್ಯಕೀಯ ನೆರವನ್ನು ಒದಗಿಸುತ್ತಿದ್ದರು. ಈ ತಂಡದ ನೇತೃತ್ವವನ್ನು ಉತ್ಸಾಹ ತುಂಬಿದ ಹರೆಯದ ಬುದ್ಧಿವಂತ

ಅದರ ಜಂಟಿ-ಸ್ಥಾಪಕಿಯಾದ ಮದರ್ ಮರ್ಚಲಿನ ಬೊಸತ್ತ





ಕೋಮೊನಲ್ಲಿಯ ಪವಿತ್ರ ಹೃದಯ ಪುಣ್ಯಕ್ಷೇತ್ರದಲ್ಲಿ ಇಟ್ಟಿರುವ ಪುನೀತೆ ಸಹೋದರಿ ಕ್ಲೇರ್ ಬೊಸಾಟ್ಟ

ಹೆಣ್ಣು ಮಗಳಾದ ಮಾರ್ಚಲಿನ ಬೊಸಾತ್ತ (1847–1939) ಅವರು ವಹಿಸಿಕೊಂಡಿದ್ದರು. ಅಲ್ಲಿಯ ಧರ್ಮಕೇಂದ್ರದ ಗುರುವಿನ ಮರಣದ ನಂತರ, ಪುಟ್ಟ ಬೀಜವಾದ ಆ ಧಾರ್ಮಿಕ ಗುಂಪು ಯಾರನ್ನು ವಿಶ್ವಾಸಿಸುವುದು, ಅಥವಾ ಯಾರ ಆಶ್ರಯದಲ್ಲಿ ತಮ್ಮನ್ನು ತಾವು ಒಳಪಡಿಸಿಕೊಳ್ಳುವುದು ಎಂಬುದನ್ನು ತಿಳಿಯದ ಸ್ಥಿತಿ ಉಂಟಾಗಿ, ಆ ಸಂಸ್ಥೆಯು ಅವನತಿಗೊಳ್ಳುವ ಅಪಾಯವನ್ನು ಎದುರಿಸುತ್ತಿತ್ತು. ಗುರು ಗ್ವಾನೆಲ್ಲರು ಆ ಹದಿವಯಸ್ಕ ಕನ್ಯಾಸ್ತ್ರೀಯರಿಂದಾಗಿ ನಿಜವಾದ ಸಮಸ್ಯೆ ಎದುರಿಸಬೇಕಾಯಿತು. ಕಾರಣ; ಅವರ ಬಗ್ಗೆ ಹರಡಿದ್ದ ವದಂತಿ, 'ಆ ಧರ್ಮಗುರು ಅನೇಕ ಆಲೋಚನೆ ಹೊಂದಿದ್ದಾರೆ,' 'ಆತ ಬಿಸತಲೆಯ ಗರ್ವ ಉಳ್ಳವ' ಹಾಗೂ 'ಆತನ ಬಗ್ಗೆ ಜಾಗೃತವಾಗಿರಬೇಕು' ಎಂಬ ಊಹಾಪೋಹಗಳು ಅವರು ಅಲ್ಲಿಗೆ ಆಗಮಿಸುವುದಕ್ಕೆ ಅಡಚಣೆಯಾಗಿದ್ದವು. ಆದಾಗ್ಯೂ ಆ ಸಭೆಯ ಸಹಸ್ಥಾಪಕಿಯಾಗಲಿದ್ದ ವಂದಿತ ಸಹೋದರಿ, ಮರ್ಚಲೀನ ಅವರೊಡನೆ ಕುಳಿತು 'ಪೊಲೆಂತ' ಎಂಬ ತಿಂಡಿ ಹಾಗೂ ಕೆಲವು ತರಕಾರಿ ಎಲೆಗಳ ಮಿಶ್ರಣದ 'ಸಲಾಡ್' ಅನ್ನು ಹಂಚಿಕೊಳ್ಳುವ ವೇಳೆ, ಆ ಧರ್ಮಗುರುವಿನ ಹೃದಯದ ಆಕಾಂಕ್ಷೆಗಳು, ಸ್ವರ್ಗಸಮನಾದ ಬೆಳಕನ್ನು ಚೆಲ್ಲುವ ವಿಶಾಲ ಹಾಗೂ ಪರಿಶುದ್ಧ ಎಂದು ಗ್ರಹಿಸಲು ಸಾಧ್ಯವಾಯಿತು. ಆ ಘಳಿಗೆಯಿಂದಲೇ ತಮ್ಮ ಕನ್ಯಾಸ್ತ್ರೀ ಗೃಹಕ್ಕೆ ಭೇಟಿನೀಡಿ, ಅವರ ಉದ್ದೇಶಗಳಿಗೆ



ಸರೋವರದ ಬಳಿಯಿಂದ ಕಾಣುವ ಪಿಯಾನೆಲ್ಲೊ ಲ್ಯಾರಿಯೊ ವಿಹಂಗಮ ನೋಟ

ಮಾರ್ಗದರ್ಶನ ನೀಡುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ಗುರು ಗ್ವಾನೆಲ್ಲರನ್ನು ಕೇಳಿಕೊಳ್ಳಲಾಯಿತು.

ಮುಂದೆ ಅಲ್ಲಿ ಜರುಗಲಿರುವ ಅನೇಕ ಬೆಳವಣಿಗೆಗೆ ಪಿಯನೆಲ್ಲೊ ಆರಂಭಿಕ ತಾಣದಂತಾಯಿತು. ಭಾಗಶಃ ಇದಕ್ಕೆ ಸಹೋದರಿ ಕ್ಲೇರ್ ಬೊಸಾತ್ತ (1858–1887). ಧರ್ಮ ಭಗಿನಿಯು ಚುರುಕು ಬುದ್ಧಿ ಆದರೆ ವಿಪರೀತ ನಾಚಿಕೆ ಸ್ವಭಾವದವರಾಗಿದ್ದು ಗುರು ಗ್ವಾನೆಲ್ಲರ ಆಧ್ಯಾತ್ಮಿಕ ನಿರ್ದೇಶನದ ಫಲಶ್ರುತಿ ಎಂಬಂತೆ, ನಿಗೂಢ ಪರಿಶುದ್ಧತೆಯ ಹಂತದಲ್ಲಿ ತಮ್ಮ ಇಪ್ಪತ್ತೊಂಭತ್ತನೆಯ ವಯಸ್ಸಿನಲ್ಲಿ ನಿಧನರಾಗಿದ್ದರು. 21 ಏಪ್ರಿಲ್ 1991 ರಂದು ವಿಶ್ವಗುರು ಎರಡನೇ ಜಾನ್‌ಪಾಲ್‌ರು ಅವರನ್ನು ಪುನೀತೆಯ ಸ್ಥಾನಕ್ಕೇರಿಸಿದರು.

ಗುರು ಗ್ವಾನೆಲ್ಲರವರು, 1886 ರಲ್ಲಿ ಪಿಯಾನೆಲ್ಲೊದಿಂದ, ಕೆಲವು ಕನ್ಯಾಸ್ತ್ರೀಗಳ ಜೊತೆಗೂಡಿ ಮುನ್ನಡೆದರು. ಆ ಸಭೆಯ ಹೆಸರು ಅನೇಕ ಸಾರಿ ಬದಲಾವಣೆಗೊಳ್ಳುತ್ತ, ಅಂತಿಮವಾಗಿ 'ದೈವಾನುಗ್ರಹ ಸಂತ ಮರಿಯಮ್ಮನ ಪುತ್ರಿಯರು' (Daughters of St. Mary of Providence) ಎಂಬ ಹೆಸರು ಅದಕ್ಕೆ ಸ್ಥಿರವಾಯಿತು. ಧರ್ಮಗುರುಗಳಿಗೆ ವಿರೋಧಿಗಳ ಆಕ್ಷೇಪಣೆಗಳಿದ್ದರೂ, ಅಲ್ಲಿಯ




20ನೇ ಶತಮಾನದ ಆರಂಭದಲ್ಲಿದ್ದಂತ ಕೋಮೊ ಪ್ರದೇಶದ ದೃಶ್ಯ



ಸರೋವರದ ಬಳಿಯಿಂದ ಕಾಣುವ ಪಿಯಾನೆಲ್ಲೊ ಲ್ಯಾರಿಯೊ ವಿಹಂಗಮ ನೋಟ

20ನೇ ಶತಮಾನದ ಆರಂಭದಲ್ಲಿದ್ದಂತ ಮಿಲಾನ್ ನಗರ



ಮುಖ್ಯಸ್ಥರು ಆ ಸಂಸ್ಥೆಯ ಸಾಮಾಜಿಕ ಪ್ರಾಮುಖ್ಯತೆಯ ದಾನ-ಧರ್ಮದ ಕಾರ್ಯಗಳನ್ನು ಮನಗಂಡು ಅಥವ ಗುರು ಗ್ವಾನೆಲ್ಲರ ಪ್ರೀತಿಯ ಬಲವಂತಕ್ಕೆ ಒಳಪಟ್ಟು ಅವರು ಸ್ವಲ್ಪಕಾಲ ಸ್ಥಿರವಾಗಿ ನೆಲೆಗೊಳ್ಳಲು ಸಾಧ್ಯವಾಯಿತು. ನಿಜಕ್ಕೂ ವಾಸ್ತವ ಸಂಗತಿಯಾದ 'ಇತರೆ ಸಮಯಗಳಲ್ಲಿ ಶರೀರಗಳ ಮೇಲೆ ಯುದ್ಧ ನಡೆಸಲಾಗಿದ್ದು, ಈಗ ಮನಸ್ಸುಗಳ ಮೇಲೆ ಯುದ್ಧ ನಡೆಸಲಾಗುತ್ತಿದೆ' (*La Divina Provvidenza 1893, 19*), ಎಂಬಂತೆ ಸಂಬಂಧಪಟ್ಟವರ ವಿಶ್ವಾಸ ಗಳಿಸಿ ಆ ಸಂಸ್ಥೆಯನ್ನು ಬೆಳೆಸುವುದರಲ್ಲಿ ಗುರು ಗ್ವಾನೆಲ್ಲರವರು ಜಯಶಾಲಿಯಾದರು.

ಮಿಲಾನ್ ಪ್ರಧಾನಾಲಯ ಗೋಪುರದ ಶಿಖರದಲ್ಲಿ ಗುರು ಗ್ವಾನೆಲ್ಲರ ಸ್ಮಾರಕ



1890 ರಲ್ಲಿ ಮಿಲಾನ್ ನಗರದ ಧರ್ಮಾಧ್ಯಕ್ಷರಾಗಿದ್ದ ಅತಿಪೂಜ್ಯ ಆಂದ್ರಿಯ ಕಾರ್ಲೋಫೆರಾರಿರವರು ಆರಂಭದಿಂದಲೇ ಅವರಿಗೆ ಬೆಂಬಲವಾಗಿ ಇದ್ದುದರಿಂದ ನರ್ಸರಿ ಶಾಲೆ ಹಾಗೂ ಧಾರ್ಮಿಕ ನಿಲಯಗಳನ್ನು ಗುರು ಗ್ವಾನೆಲ್ಲರು ಆರಂಭಿಸಿದರು. ಯಾರು ಅವರನ್ನು ತಡೆಹಿಡಿಯಲಾಗುತ್ತಿರಲಿಲ್ಲ. 'ನಾವು ಬಡಜನರನ್ನು ರಕ್ಷಿಸುವುದು ಮಾತ್ರವಲ್ಲದೆ, ಅವರಿಗಾಗಿ ಶೋಧವನ್ನೂ ಕೈಗೊಳ್ಳಬೇಕು .... ಕಾಪಾಡಬೇಕಾಗಿರುವ ಬಡಜನರಿರುವವರೆಗೆ ನಾವು ನಮ್ಮ ಪ್ರಯತ್ನಗಳನ್ನು ನಿಲ್ಲಿಸಬಾರದು' ಎಂಬ ಉತ್ಸಾಹದ ಮಾತುಗಳೊಂದಿಗೆ ಅವರು ಹೊಸ 'ನಿಲಯ'ಗಳನ್ನು ಆರಂಭಿಸುತ್ತ ಮುಂದಿನ ಕೆಲ ವರ್ಷಗಳಲ್ಲಿ ಇಟಲಿ, ಸ್ವಿಟ್ಜರ್‌ಲ್ಯಾಂಡ್ ಹಾಗೂ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಅಂತಹ ಸಂಸ್ಥೆಗಳ ಒಕ್ಕೂಟವೇ ತಲೆಯೆತ್ತಿತು. ತಾವು 1902 ರಲ್ಲಿ ಪವಿತ್ರ ದೇಶ (Holy Land)ಕ್ಕೆ ತೆರಳಿದಾಗ ಹಾಗೂ 1908 ರಲ್ಲಿ ಲಂಡನ್ನಿನಲ್ಲಿ ಜರುಗಿದ ಪರಮಪ್ರಸಾದದ ಮಹಾ ಸಮಾವೇಶ (Eucharistic Congress) ಗಳ ವೇಳೆ ತಮ್ಮ ಜೊತೆಯಿದ್ದ ಪುನೀತ ಘನತೆವೆತ್ತ ಕಾರ್ಡಿನಲ್

ಫೆರಾರಿಯವರು, ಆ ಎರಡು ಸಭೆಗಳು ಅತ್ಯಂತ ಸಂಕಷ್ಟ ಸ್ಥಿತಿ ಅನುಭವಿಸುವ ಕಾಲದಲ್ಲಿ ಅವರೂ ಸದಾ ಅವರ ಬೆಂಬಲಕ್ಕೆ ನಿಂತರು.

ಸ್ವಾಮಿ ಗ್ವಾನೆಲ್ಲರವರು ತಮ್ಮ ಸಂಸ್ಥೆಯ ಪುರುಷ ವಿಭಾಗವನ್ನು ಸ್ಥಾಪಿಸಲು ಶ್ರಮಿಸುತ್ತಿದ್ದ ಕೊಮೋನಲ್ಲಿಯ ಆ ಆರಂಭಿಕ ವರ್ಷಗಳು ಅವರ ಪಾಲಿಗೆ ಅತ್ಯಂತ ಕಷ್ಟಕರವಾಗಿದ್ದವು; ಬಡತನ ಮತ್ತು ನಿರ್ಗತಿಕ ಸ್ಥಿತಿ ಅಲ್ಲಿ ತಾಂಡವವಾಡುತ್ತಿತ್ತು. ಆ ಕಷ್ಟಕರ ಪರಿಸ್ಥಿತಿಯ ಸಮಸ್ಯೆಯನ್ನು ಎದುರಿಸಲು ಗುರು ಗ್ವಾನೆಲ್ಲರವರು ಉದ್ಯೋಗಕ್ಕಾಗಿ ಹುಡುಕಾಡಿದರು ಹತ್ತಿರವೇ ಇದ್ದ ಒಂದು ಕಾರ್ಖಾನೆಯ ನಿರ್ದೇಶಕರ ನೆರವಿನಿಂದ ಕೆಲವೊಂದು ಧಾರ್ಮಿಕ (ಕನ್ಯಾಸ್ತ್ರೀ) ಮಹಿಳೆಯರನ್ನು ಒಳಗೊಂಡಂತೆ ಹರೆಯದ ಹೆಣ್ಣುಮಕ್ಕಳಿಗೆ ಅಲ್ಲಿ ಉದ್ಯೋಗ ಕೊಡಿಸಿದರು. 'ದುಡಿಮೆಯೇ ಅನ್ನ, ಅದುವೇ ಪ್ರಾರ್ಥನೆ ಹಾಗೂ ರಕ್ಷಣಾ ಹಾದಿ.' (*La Divina Provvidenza, 1864, 169*) ಎಂದು ಸ್ಥಾಪಕರಾದ ಗುರು ಗ್ವಾನೆಲ್ಲ ಪದೇ ಪದೇ ಹೇಳುತ್ತಿದ್ದರು. ಇಷ್ಟೆಲ್ಲಾ ತೊಂದರೆಗಳ ನಡುವೆಯೂ ಅವರ ಸಂಕಷ್ಟ ಪರಿಸ್ಥಿತಿ ಇನ್ನಷ್ಟು ಘೋರವಾಯಿತು. ಕಾರಣ; ಕೆಲವೊಂದು ಕಾರ್ಮಿಕ ವರ್ಗವು 'ಪ್ರತ್ಯೇಕತಾ ಪಂಗಡದವರು' ಧರ್ಮಸಭೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದುದರಿಂದ, ತಮ್ಮ ಸಂಸ್ಥೆಯ ಹೆಣ್ಣುಮಕ್ಕಳು ತೊಂದರೆಯನ್ನು ಎದುರಿಸಬೇಕಾಗಿತ್ತು. ಕೆಲಸಗಾರರ ಹಾಗೂ ಕಾರ್ಮಿಕರ ಲೌಕಿಕ ಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿದ್ದ ಗುರು ಗ್ವಾನೆಲ್ಲರು, ಮೌಲ್ಯಾಧಾರಿದ ನೀತಿ ಜೀವನವನ್ನು ರೂಪಿಸುವ ಉದ್ದೇಶ ಹೊಂದಿದ್ದರು. ಇದೇ ಕಾರಣಕ್ಕಾಗಿ, ಅವರು ತಮ್ಮ ಕನ್ಯಾಸ್ತ್ರೀ ಮಠದ ಭಗಿನಿಯರನ್ನು 1899 ರಲ್ಲಿ ಕಾರ್ಖಾನೆಗೆ ಕಳುಹಿಸಿ, ಮನೆಯಿಂದ ಅಗಲಿ ದೂರ ಬಂದಿದ್ದ ಇತರೆ ಹರೆಯದ ದುಡಿಯುವ ಹೆಣ್ಣುಮಕ್ಕಳಿಗೆ ನೆರವು ನೀಡುತ್ತಿದ್ದರು.



***1902 ರಲ್ಲಿ ಸ್ವಾಮಿ ಗ್ವಾನೆಲ್ಲರು ಪವಿತ್ರ ನಾಡಿಗೆ ಭೇಟಿ ನೀಡಿದಾಗ***



***ಕೋಮೊದಲ್ಲಿಯ ರೇಷ್ಮೆ ಕಾರ್ಖಾನೆಯಿಂದ ಹಿಂತಿರುಗುತ್ತಿರುವ ರೇಷ್ಮೆ ನೂಲು ತೆಗೆಯುವ ಕೆಲಸಗಾರರು***

# ದಯಾಳತೆಯ ಸಂಪುಟ

ದೈವೀಕ ಅನುಗ್ರಹ (Divine Providence) ಕ್ಕೆ ಸಮರ್ಪಿಸಲ್ಪಟ್ಟ ಕೋಮೊದಲ್ಲಿಯ 'ಮಾತೃ ಗೃಹ' (Mother House) ವು ಎಲ್ಲಾ ತರಹದ, ಪರಿಸ್ಥಿತಿಗಳಲ್ಲಿ, ಎಲ್ಲಾ ವಯಸ್ಸಿನ ಜನರನ್ನು ತನ್ನಲ್ಲಿಗೆ ಸೆಳೆಯಿತು. ಅವರಲ್ಲಿ ಅನಾಥರು, ಮಕ್ಕಳು, ಹರೆಯದ ವಿದ್ಯಾರ್ಥಿಗಳು ಮತ್ತು ಕುಶಲಕರ್ಮಿಗಳು, ತಿರಸ್ಕರಿಸಲ್ಪಟ್ಟ ಹಿರಿಯರು, ದೀರ್ಘಕಾಲದ ರೋಗಗ್ರಸ್ತ ಜನರು ಹಾಗೂ ಆ ದಿನಗಳಲ್ಲಿ ಬಹಳ ಒರಟಾಗಿ ಕರೆಯುತ್ತಿದ್ದ 'ಮೂರ್ಖರು' ಮತ್ತು 'ಮತಿಗೆಟ್ಟವರು' ಎನ್ನಲಾದ ಬೆಳವಣಿಗೆ ಕುಂಠಿತರನ್ನು ವಾತ್ಸಲ್ಯದಿಂದ 'ಒಳ್ಳೆಯ ಮಕ್ಕಳು' ಎಂದೆನ್ನುತ್ತಿದ್ದರು. ಹೀಗೆ ಎಲ್ಲಾ ಮಾನವ ವರ್ಗಕ್ಕೆ ಅಲ್ಲಿ ಸಭ್ಯಸ್ವಾಗತ ದೊರಕಿ, ಕ್ರಿಸ್ತನ ಮುಖದ ವಿಭಿನ್ನತೆಯ ಸಂಕಷ್ಟದ ವ್ಯಕ್ತಿಗಳ ಆ ಸಮೂಹವನ್ನು ಕೋಮೋದ ಜನ 'ನೋವಾನ ನೌಕೆ' ಎಂದೇ ಕರೆಯುತ್ತಿದ್ದರು. ಈ ಕಾರಣಕ್ಕಾಗಿ 'ಸಕಲ ಎಲ್ಲೆಗಳನ್ನೂ ಮೀರಿದ ಅತೀ ವಿಸ್ತಾರದ (*Relazione per l'approvazone dell' Istituto,* November 19, 1900), ಪ್ರತಿ ಅಗತ್ಯವನ್ನೂ ಪೂರೈಸಲು ಆಶಿಸುತ್ತಿದ್ದ ಗುರು ಗ್ವಾನೆಲ್ಲರನ್ನೂ ಆರೋಪಿಯಾಗಿಸಿದ್ದವರು ಇದರ ಉದ್ದೇಶಗಳನ್ನು ಸೀಮಿತಗೊಳಿಸುವಂತೆ ವಿನಂತಿಸಲಾಗಿತ್ತು. ಹೀಗೆ ಇಪ್ಪತ್ತನೆ ಶತಮಾನದ ಪ್ರಾರಂಭದಲ್ಲಿ, ಕಷ್ಟ ಪಡುವವರಿಗಾಗಿ ತಮ್ಮ ಹಸ್ತಗಳನ್ನು ವಿಶಾಲವಾಗಿ ಅಗಲಿಸಿದ್ದ ಗುರು ಗ್ವಾನೆಲ್ಲರು ಪ್ರಾರಂಭಿಸಿದ ಸಭೆಗೆ ಮಾನ್ಯತೆ ನೀಡಬೇಕಾಗಿ ಧರ್ಮಸಭೆಯನ್ನು ಕೋರಿದರು.



***ಗುರು ಗ್ವಾನೆಲ್ಲರ ಮೊದಲ ಸಂಸ್ಥೆ. ಕೋಮೊದಲ್ಲಿಯ ಕಾಸ ದಿ ದಿವಿನಾ ಪ್ರೊವಿದೆಂಝು***

ಆದಾಗ್ಯೂ, ಪ್ರತಿಯೊಂದು ಸ್ಥಳ ಹಾಗೂ ಪರಿಸ್ಥಿತಿಯಲ್ಲಿ ಸಕಲರಿಗೂ ನೆರವನ್ನು ವಿಸ್ತರಿಸುತ್ತಿದ್ದು, ಅವರ ಕಾಯಕಕ್ಕೆ 'ಸಾರ್ವತ್ರಿಕ ಮೆಚ್ಚುಗೆ ಮತ್ತು ಮಾನ್ಯತೆ' (*epitaph on the tomb of Fr. Aloysius Guanella, 1916*) ಯ ಪ್ರತಿರೋಧವಿಲ್ಲದ ಗೌರವ ಮತ್ತು ಹಿರಿಮೆಯನ್ನು ಹಾಗೂ ಅವರ ಕೆಲಸಗಳಿಗೆ ನಿಶ್ಚಲವಾದ ಗುರುತನ್ನು ಕೊಡಿಸಿದ್ದವು. ಸಹಜವಾಗಿಯೇ, ವಿವಿಧ ವರ್ಗಗಳ ಅನೇಕರು ಸ್ವೀಕರಿಸುತ್ತಿದ್ದ ಆ ವಿಭಿನ್ನ ಸೇವಾಕಾರ್ಯವು, ಗೊಂದಲಗಳಿಗೆ ಎಡೆಮಾಡಿದ್ದರೂ, ತಮ್ಮ ಸೇವಾಕಾರ್ಯದ ಆರಂಭದಿಂದಲೇ ಗುರು ಗ್ವಾನೆಲ್ಲರು ಆ ದಿನಗಳಲ್ಲಿ ಅಗತ್ಯವಾಗಿದ್ದ (Charismatic) ಸ್ಫೂರ್ತಿಗೆ ಪ್ರತೀಕವಾದರು.

ಆ ಕಾಲದಲ್ಲಿ ಲೋಂಬಾರ್ದಿ ಕಣಿವೆಗಳಲ್ಲಿ ಸದಾಕಾಲಕ್ಕೂ ಕೊರತೆಯಾಗದಿರುವ ಒಂದೇ ಅಂಶವೆಂದರೆ ಬಡತನವಾಗಿತ್ತು;



*ಪರಗ್ವೇ ದೇಶದಲ್ಲಿ ಗುರು ಗ್ವಾನೆಲ್ಲರ ಸೇವಾಕಾರ್ಯಗಳು ವಿವಿಧ ವರ್ಗಗಳ ಅಗತ್ಯಗಳನ್ನು ಪೂರೈಸುತ್ತಿವೆ.*

ಏಕಾಂಗಿಯಾದ ವೃದ್ಧರಿಗೆ ಒಂದು ಆಶ್ರಯತಾಣ; ಮಕ್ಕಳಿಗೆ ಪೌಷ್ಠಿಕ ಆಹಾರ ಹಾಗೂ ಶಿಕ್ಷಣದ ಅಗತ್ಯವಿತ್ತು; ಸಾಮಾನ್ಯ ಜನರಿಗೆ ಕನಿಷ್ಠ ಮೂಲಭೂತ ಸಂಸ್ಕೃತಿ ಹಾಗೂ ನೈತಿಕ ಮತ್ತು ಕ್ರೈಸ್ತ ಮಾರ್ಗದರ್ಶನ ಬೇಕಾಗಿತ್ತು; ಅನೇಕ ಅಂಗವಿಕಲರಿಗೆ, ಹೀನ ಸ್ಥಿತಿಯಲ್ಲಿದ್ದ ಹಾಗೂ ಬೀದಿಗಳಲ್ಲಿ ವ್ಯಂಗ್ಯ ಉಪೇಕ್ಷೆಗಳಿಗೆ ಗುರಿಯಾಗಿರುವುದರಿಂದ, ರಕ್ಷಣೆ ನೀಡುವ ಮಾನವೀಯ ಆರೈಕೆಯ ಅಗತ್ಯವಿತ್ತು. 1883 ನೇ ಸಂವತ್ಸರದಲ್ಲಿ, ಅಂದರೆ ಗುರು ಗ್ವಾನೆಲ್ಲರು ಕೋಮೋಗೆ ಆಗಮಿಸುವ ಮೂರು ವರ್ಷಗಳ ಪೂರ್ವದಲ್ಲೇ ಆ ನಗರದಲ್ಲಿ ಎರಡನೇ ಮಾನಸಿಕ ಬುದ್ಧಿ ಮಾಂಧತೆಯರಿಗೆ ಎರಡನೇ ಪ್ರಾಂತೀಯ ನಿಲಯವನ್ನು ನಿರ್ಮಿಸಲಾಗಿತ್ತು. ಅಲ್ಲಿಯ ರೋಗಿಗಗಳಿಗೆ ಗೌರವಾನ್ವಿತ ನೆರವನ್ನು

ಮೆನಾಜೂ ಎಂಬಲ್ಲಿ ಧಾರ್ಮಿಕ ಸಂಸ್ಥೆಗಳ ಸ್ಥಾಪಕರಾಗಿ ಗುರು ಗ್ವಾನೆಲ್ಲರವರು ಆಗಾಗ ಶ್ರೀ ಸಾಮಾನ್ಯರೊಡನೆ ಸಹಕರಿಸುತ್ತಿದ್ದರು.



ಒದಗಿಸುವ ಪ್ರಯತ್ನಗಳ ಹೊರತಾಗಿಯೂ ಮನಃಶಾಸ್ತ್ರೀಯ ಶುಶ್ರೂಷೆಯ ಕೊರತೆಯು ತೀವ್ರವಾಗಿತ್ತು. ಸಾಧಾರಣವಾಗಿ ತೀವ್ರವಾಗಿ ಬುದ್ಧಿವಮಾಂದರು (ಇವರು ಒಮ್ಮೊಮ್ಮೆ ಅಪಾಯಕಾರಿಗಳೂ ಆಗಿದ್ದರು) ಹಾಗೂ ವೃದ್ಧರು, ಜ್ಞಾಪಕ ಶಕ್ತಿಹೀನರು, ಗೊಂದಲ, ಸಮಯದ ಪ್ರಜ್ಞೆಯ ಕೊರತೆ ಅಥವಾ ಮಾತನಾಡುವ ಅಡೆತಡೆಗಳಿದ್ದವರು ಹಾಗೂ ಪ್ರಜ್ಞೆಯಿಲ್ಲದವರ ನಡುವೆ ಯಾವುದೇ ಭಿನ್ನತೆಯನ್ನು ಮಾಡಿರಲಿಲ್ಲ. ಹೀಗೆ ಯಾವುದೇ ಬೇಧಭಾವ ತೋರ್ಪಡಿಸದೆ, ಆ 'ನಿಲಯ' ಎಲ್ಲರಿಗೂ ಆಶ್ರಯ ನೀಡಿತು. ಇದರ ಜೊತೆಗೆ, ತಮ್ಮ ಕುಟುಂಬದವರು ಆರೈಕೆ ಮಾಡಲು ಅಸಹಾಯಕವಾದ ಅಂಗವಿಕಲ ಮಕ್ಕಳು ಹಾಗೂ ಮೂರ್ಛೆರೋಗ ಇತ್ಯಾದಿ ... ವಿವಿಧ ಖಾಯಿಲೆಗಳಿಂದ ನರಳುತ್ತಿದ್ದ ವಯಸ್ಕರೂ ಅಲ್ಲಿ ಆಶ್ರಯ ಪಡೆದಿದ್ದರು. ಸಾಮಾಜಿಕ ಕೆಡುಕುಗಳಾದ ಕುಡಿತ



ಮಿಲಾನ್ ನಗರದಲ್ಲಿ ಗುರು ಗ್ವಾನೆಲ್ಲ 1908

ಹಾಗೂ ಪೌಷ್ಠಿಕ ಆಹಾರದ ಕೊರತೆಯ ಕಾರಣ, ವಿಶೇಷವಾಗಿ ಕೆಳವರ್ಗಗಳ ಜನರಲ್ಲಿ ಈ ಸಮಸ್ಯೆಗಳು ಹೆಚ್ಚಾಗಿ ವ್ಯಾಪಿಸಿದ್ದವು. ಕೆಳಕುಟುಂಬಗಳು 'ತೊಂದರೆ ನೀಡುವ ವ್ಯಕ್ತಿಗಳ ಕಾಟದಿಂದ ತಪ್ಪಿಸಿಕೊಳ್ಳಲು, ಅಂತಹವರನ್ನು ಬಹಳ ಸುಲಭವಾಗಿ ಇಂತಹ ಆಶ್ರಯಧಾಮಗಳು, ಧಾರ್ಮಿಕ ಸಂಸ್ಥೆಗಳು ಮತ್ತು ಸುಧಾರಣಾ ಗೃಹಗಳಿಗೆ ಸೇರಿಸುತ್ತಿದ್ದು, ಆ ಮೂಲಕ ಮನೆ–ಮಠವೆಂಬ ನಾಲ್ಕು ಗೋಡೆಗಳ ಸುರಕ್ಷಿತತೆಯಲ್ಲಿ ಬೆಳೆದು, ಬದುಕಿ ಅಲ್ಲೇ ಮರಣಿಸ ಬೇಕಾದ ವ್ಯಕ್ತಿಗಳು ದಾನ–ಧರ್ಮ ಹಾಗೂ ನ್ಯಾಯ–ನೀತಿಗಳಿಗೆ ಗಂಭೀರ ಧಕ್ಕೆಯುಂಟುಮಾಡುತ್ತಿದ್ದಾರೆ' (*La, Divina Provvidenza, 1903, 51*) ಎಂದು ಗುರು ಗ್ವಾನೆಲ್ಲರವರು ದೂರಿದ್ದಾರೆ. ಹಾಗೆಯೇ ಎಲ್ಲೆಲ್ಲಿ ತಮ್ಮ ನಯವಾದ ಮಾತುಗಳಿಗೆ ಮನ್ನಣೆ ದೊರಕಲಿಲ್ಲವೋ, ಅಂತಹ ಸ್ಥಳಗಳಲ್ಲಿ ತಾವೇ ನೇರವಾಗಿ



ಕೋಮೊ ಕಾಸ ದಿವಿನ ಪ್ರಾವಿಡೆಂಝ ಕಟ್ಟಡ

ಮಧ್ಯೆ ಪ್ರವೇಶಿಸುತ್ತಿದ್ದರು; ಹೀಗೆ 1910 ರ ಜನವರಿಯಲ್ಲಿ ಗುರು ಗ್ವಾನೆಲ್ಲರು ಕೋಮೊ ಆಶ್ರಯಧಾಮದೊಡನೆ ಒಪ್ಪಂದ ಮಾಡಿಕೊಂಡು, ಆಸ್ಪತ್ರೆ, ಆರೈಕೆಯ ಅಗತ್ಯವಿಲ್ಲದಿದ್ದ 'ಅಪಾಯಕಾರಿಯಲ್ಲದ ದುರ್ಬಲ ಮನಸ್ಸಿನ' ವ್ಯಕ್ತಿಗಳನ್ನು 'ಮನೆ ದಿವಿನಾ ಪ್ರಾವಿದೆಂಜಾ' ಸಂಸ್ಥೆಗೆ ವರ್ಗಾಯಿಸಿದರು. ಹೀಗೆ, ಆ ಕಾಲದ ಮಾನಸಿಕ ಆಸ್ಪತ್ರೆಗಳ ಹಿಂಸೆಗಳಿಂದ ಮುಕ್ತಿಪಡೆದು, ವ್ಯಕ್ತಿಗಳಿಗೆ ಘನತೆ, ಗೌರವಗಳನ್ನು ಮತ್ತೆ ಒದಗಿಸಲು ಸಾಧ್ಯವಾಗಿತ್ತು. ದಾನಿಗಳ ಮುಖಾಂತರ ದೇವರು ಕೊಡುವ ಸಹಾಯವು ಎಲ್ಲಾ ಆಶ್ರಮದ ನಿವಾಸಿಗಳಿಗೆ ಸೀಮಿತ. ಆದ್ದರಿಂದ ಈ ಸತ್ಯವನ್ನು ಎಲ್ಲಾ ನಿವಾಸಿಗಳು ನಂಬುವಂತೆ ಹಾಗೂ ಇದೇ ಅವರ ಸ್ವಂತ ಗೃಹ ಎನ್ನುವ ಹಾಗೆ ವಿಶ್ವಾಸ ಮೂಡಿಸಬೇಕು' (*Opere, IV, 450*)

# ಅನುಮೋದನೆಗಾಗಿ ಹಾತೊರೆಯುವಿಕೆ

1889ರಲ್ಲಿ, ತಾವು ಕೋಮೊವಿಗೆ ಆಗಮಿಸಿದ ಕೆಲವೇ ವರ್ಷಗಳ ನಂತರ, ತಮ್ಮ 'ದಾನಶೀಲ ಸೇವಕರ' ಸಭೆಗೆ ಹೊಸ ಜೀವನ ಕೊಡಲೆಂದು, ಸ್ವಾಮಿ ಗ್ವಾನೆಲ್ಲರವರು ಹರೆಯದ ವಿದ್ಯಾರ್ಥಿಗಳನ್ನು ಸ್ವೀಕರಿಸಿದರು.

ಪ್ರಾರಂಭದಲ್ಲಿ ಅವರನ್ನು 'ಪುತ್ರರು' ಎಂದು, ಆ ಬಳಿಕ ಅವರನ್ನು 'ಪವಿತ್ರ ಹೃದಯದ ಸೇವಕರು' ಎಂದು ನಾಮಕರಣ ಮಾಡಿದರು. ಈ ಬದಲಾವಣೆ ಕಾರಣ; ಅದೇ ಹೆಸರಿನ ಮತ್ತೊಂದು ಧಾರ್ಮಿಕ ಸಭೆಯು ಆಗ ಅಸ್ತಿತ್ವದಲ್ಲಿತ್ತೆಂದು ಇತಿಹಾಸ ವಿವರಿಸುತ್ತದೆ. ಅವರ ವಿಧೇಯತೆಯು ಬೇರಿನಂತೆ ಶುಭಸಂದೇಶದ ಒಳಹೊಕ್ಕ ಅವರ ಚಿಂತನೆಯನ್ನು ನಮಗೆ ತೋರ್ಪಡಿಸುತ್ತದೆ. ಸೇವಕನಾಗಿರುವುದು ಪುತ್ರನಿಗಿಂತ ಕಡಿಮೆ ಎಂಬ ಸಾಮಾನ್ಯ ಭಾವನೆಯನ್ನು ಇದು ಬುಡಮೇಲು ಮಾಡುತ್ತ, ಅತ್ಯಂತ ಕಡು ದೀನರಿಗೆ ಸೇವಕರಾಗಿರಲು ಸಾಧ್ಯ ಎಂಬುದನ್ನು ನಮಗೆ ಮನದಟ್ಟು ಮಾಡಿಸಿ, ಆ ಕಾರಣ, ಅವರು ಪುತ್ರರೇ ಆಗಿದ್ದರಿಂದ 'ದಾನಶೀಲ ಸೇವಕ'ರೆಂದು ಕರೆಯಲಾಯಿತು.

ಕೋಮೊದಲ್ಲಿ ವಾಸಿಸುವ ವೇಳೆ, ಜನಪ್ರಿಯವಾದ ಸನ್ಯಾಸಿ ಜೀವನ ಹಾಗೂ ಧಾರ್ಮಿಕ ಕೃತಿಗಳನ್ನು ಬರೆಯಲು ಅವರಿಗೆ ಸಮಯವಿರಲಿಲ್ಲ. ಕಾರಣ; ಅವರು ತಮ್ಮ ಸಭೆಗಳ ಪುತ್ರ–ಪುತ್ರಿಯರ ಆಧ್ಯಾತ್ಮಿಕ ಜೀವನ



*ಬ್ರೆಝಿಲ್ ದೇಶದಲ್ಲಿಯ ಸೇವಾಕೇಂದ್ರ*

*ಗುರು ಗ್ವಾನೆಲ್ಲರು ಸ್ಥಾಪಿಸಿದ ಈ ಅದೃಷ್ಟದ ಸಂತ ಮರಿಯಮ್ಮನ ಪುತ್ರಿಯರು ಸಮುದಾಯಕ್ಕೆ 27 ಸೆಪ್ಟೆಂಬರ್ 1908 ರಲ್ಲಿ ಅನುಮನೋದನೆ ದೊರೆಯಿತು*

ಬೆಳವಣಿಗೆಯ ಬಗ್ಗೆ ಗಮನ ಹರಿಸಬೇಕಾಗಿತ್ತು. ಧರ್ಮಸಭೆ ಅನುಮೋದಿಸುವಂತಹ ನಿಯಮವೊಂದನ್ನು ಅವರು ಸಿದ್ಧಪಡಿಸಬೇಕಾಗಿತ್ತು. ಗ್ವಾನೆಲ್ಲರ ಸಂಸ್ಥೆಗಳಿಗೆ ಮಾನ್ಯತೆ ದೊರಕಿಸುವ ವಿಧಿ–ವಿಧಾನಗಳು ಶ್ರಮದಾಯಕ, ಸಂಕೀರ್ಣ ಹಾಗೂ ದೀರ್ಘವಾಗಿದ್ದವು. 1896 ರಲ್ಲಿ ಆರಂಭಗೊಂಡ ಆ ಮಾನ್ಯತೆಯ ಪ್ರಕ್ರಿಯೆ ಅವರ ಮರಣಾನಂತರದವರೆಗೂ ಮುಂದುವರೆದಿತ್ತು.' Daughters of St. Mary of Providence ಇದೊಂದು ಇಡೀ ಕಾರ್ಯಕ್ರಮಕ್ಕೆ ನೀಡಿದ ಹೆಸರಾಗಿತ್ತು. ಸಂಸ್ಥೆಯ ಅನುಮೋದನೆಯು 27 ಸೆಪ್ಟೆಂಬರ್ 1908 ರಲ್ಲಿ ದೊರೆತು, ಅದರ ಸಂವಿಧಾನವನ್ನು ಖಾಯಂ ಆಗಿ 20 ಮೇ 1917 ರಂದು ಅಂಗೀಕರಿಸಲಾಯಿತು. ಹಾಗೆಯೇ ಅವರ 'ದಾನಶೀಲ ಸೇವಕರು' (Servants of Charity) ಸಂಸ್ಥೆಯ ಶಾಸನಬದ್ಧ ಅನುಮೋದನೆ 15 ಆಗಸ್ಟ್ 1912 ರಲ್ಲಿ ದೊರೆತರೂ, ಅದಕ್ಕೆ ಸಂಬಂಧಿಸಿದ ಧರ್ಮಸಭೆಯ ಕಾನೂನು ಪ್ರಕ್ರಿಯೆ 16 ಜುಲೈ 1935 ರ ವರೆಗೂ ಸಾಗಿತ್ತು.

ಈ ಅನುಮೋದನೆಯ ಕಾರಣ, ಅನೇಕ ಜನರು ಗುರು ಅಲೋಷಿಯಸ್‌ರನ್ನು ಸಂಧಿಸಲು ಆಗಮಿಸಿದ್ದು, ಪ್ರತಿಯೊಬ್ಬರೂ ತಮ್ಮದೇ ಆದ ಧೋರಣೆ ಹಾಗೂ ತಮ್ಮದೇ ಆದ ಪಾತ್ರದ ಅಧಿಕಾರ ಹೊಂದಿದ್ದರು. ಕೆಲವರು ಅವರಿಗೆ ಬೆಂಬಲ ನೀಡಿದರೆ, ಇನ್ನೂ ಕೆಲವರು ಅವರ ಉದ್ದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳದಾದರು; ಗುರು ಗ್ವಾನೆಲ್ಲರವರು ಮತ್ತು ಕೆಲವರ ಜೊತೆ ಹೊಂದಿಕೊಂಡು ನಡೆದಿದ್ದಲ್ಲಿ, ಅವರು ಇವರ ಸಹಾಯಕ್ಕೆ ಹೆಚ್ಚು ಒಲವು ತೋರುತ್ತಿದ್ದರು. ಈ ಬಹುಕೋನ ಸಂಬಂಧಗಳಲ್ಲಿ ಒಂದಂತೂ ಸ್ಥಿರವಾಗಿತ್ತು; ಅದು ತಮ್ಮ ಮೂಲ ಅಂತರ್ದೃಷ್ಟಿಯ ಶ್ರೀಮಂತಿಕೆಯನ್ನು ಬಡವಾಗಿರಿಸಬೇಕೆಂಬ



ಕೊಲಂಬಿಯ ದೇಶದಲ್ಲಿನ ಸೇವಾಕೇಂದ್ರ

ದಾನಶೀಲ ಪುತ್ರರ ಧಾರ್ಮಿಕ ಸಮುದಾಯಕ್ಕೆ 16 ಜುಲೈ 1935 ರಂದು ಅನುಮೋದನೆ ದೊರೆಯಿತು.

ಭಾವನೆ, ವಿನಂತಿಗಳನ್ನು ಸ್ವಾಗತಿಲು ಹಾಗೂ ಅರ್ಥಮಾಡಿಕೊಳ್ಳಲು ಸುಲಭವಾಗಿರಲಿಲ್ಲ. ರೋಮ್‌ನ ಅಧಿಕಾರಿಗಳು (Holy See) ಆರ್ಥಿಕ ವಿಷಯಗಳನ್ನು ವ್ಯವಸ್ಥೆಗೊಳಿಸಲೆಂದು, ನಿಯಮವನ್ನು ಕಾನೂನುಬದ್ಧವಾಗಿ ಪುನಃ ಸರಿಪಡಿಸಬೇಕೆಂದು ಅವರಿಗೆ ಸೂಚನೆ ನೀಡಿತ್ತು; ಆ ಆರ್ಥಿಕ ವಿಷಯಗಳು 'ಭರವಸೆಯ ಪತ್ರ' (Bills of exchange) ಗಳಿಂದ ಹಿಡಿದು ನಗದಾಗಿ ಸಂದಾಯವಾಗುವವರೆಗೂ ಇದ್ದು, ಎರಡೂ ಸಭೆಗಳನ್ನು ಸ್ಪಷ್ಟವಾಗಿ ಪ್ರತ್ಯೇಕಿಸುವ ಮನೋಭಾವವಿತ್ತು. ಆದರೆ ಗುರು ಗ್ವಾನೆಲ್ಲರವರೂ ಅವರೆಡೂ ಒಂದೇ ಕುಟುಂಬದಂತಿರಬೇಕೆಂದು ಆಶಿಸಿ, ದಾನ-ಧರ್ಮಗಳ ಪರಿಧಿಯನ್ನು 'ಸಂಕುಚಿತ' ಗೊಳಿಸುವ ಅಗತ್ಯದ ಬಗ್ಗೆ ಪಟ್ಟು ಹಿಡಿದಿದ್ದರು. 'ಮನುಷ್ಯರನ್ನು ಹೊರತುಪಡಿಸಿ, ದೇವರನ್ನೇ ಮೆಚ್ಚಿಸುವ ಗುರಿಯಿಂದ, ಒಳಿತಿಗಾಗಿ ಒಳಿತನ್ನು ಮಾಡು' (*Opere, IV, 817*) ಎಂಬ ಕಾನೂನಿಗಿಂತ ದೂರವಾದ ಭಾವನೆಗಳನ್ನು ವ್ಯಕ್ತಪಡಿಸಿದರೂ, ಸೇವೆಯ ಅಧಿಕಾರದ ಹೆಗ್ಗಳಿಕೆಯಿಂದ, ತಮ್ಮ ಸಭೆಗೆ ಅನುಮೋದನೆ ಪಡೆಯಲು ಸಾಧ್ಯವಾಯಿತು ಎಂದು ಹೇಳಿಕೊಳ್ಳಬಹುದಾಗಿತ್ತು.

ಆ ಸುದೀರ್ಘ ಹಾಗೂ ಶ್ರಮಪೂರಿತವಾದ 'ಭರವಸೆಯ ಅನುಮೋದನೆ' ಪ್ರಕ್ರಿಯೆಯು ಸಹಜವಾಗಿಯೇ ಸ್ಥಾಪಕರನ್ನು ತೀವ್ರವಾಗಿ ಬಾಧಿಸಿತ್ತಾದರೂ, ತಮ್ಮ ಕೆಲಸ ದೇವರಿಂದ ಆದೇಶಿಸಲ್ಪಟ್ಟಿದ್ದು ಎಂದು ವಿನಯ ಹಾಗೂ ಹಿರಿದಾದ ಭಾವದಿಂದ ಅವರು ಮನದಟ್ಟುಮಾಡಿಕೊಂಡಿದ್ದರು. ಅವರು ಸದಾ 'ಅನುಕೂಲತೆಗಳನ್ನು ಹಾಗೂ ಸಂಕಷ್ಟಗಳನ್ನು ಭರಿಸುವಲ್ಲಿ ಸೋಲೊಪ್ಪದ ಸಹನೆ ಮತ್ತು ಸ್ಥಿರತೆಯನ್ನು ತೋರ್ಪಡಿಸಿದರು. ಮಾತ್ರವಲ್ಲದೆ ಅಪಹಾಸ್ಯ, ಹಾಗೂ ಕಷ್ಟಕೋಟಲೆಗಳನ್ನೂ ಎದುರಿಸಿದರು ಎಂದು, ಈ ಅನುಮೋದನಾ ಪ್ರಕ್ರಿಯೆಯ ಸಲಹೆಗಾರರಾದ ರಕ್ಷಕ ಸಭೆಯ ಕ್ಲೌದಿಯೊ ಬೆನೆದೆತ್ತಿಯವರು ಹೇಳಿದ್ದಾರೆ. ಬೆನೆದೆತ್ತಿಯವರ ಈ ಕೆಳಕಂಡ ಮಾತುಗಳು, ಗುರು ಅಲೋಷಿಯಸ್ ಗ್ವಾನೆಲ್ಲರವರ ಉತ್ತಮ ಚಿತ್ರವನ್ನು ಮೂಡಿಸುತ್ತವೆ. 'ಅವರೊಡನೆಯ ನಮ್ಮ ವ್ಯವಹಾರದ ಅನೇಕ ವರ್ಷಗಳ ಅವಧಿಯಲ್ಲಿ ಅವರು ಕಿಂಚಿತ್ತಾದರೂ ಮೋಸ, ಸುಳ್ಳಿನ ಅಥವಾ ನೆಪಗಳ ಆಂಗಿಕ ಚಿಹ್ನೆ ಅಥವಾ ಸಣ್ಣ ನುಡಿಯನ್ನು ನಾನು ಕೇಳಿಯೇ ಇಲ್ಲ ಮತ್ತು ನೋಡಿಯೂ ಇಲ್ಲ; ಅನುಕೂಲ ಅಥವಾ ಪ್ರತಿಕೂಲದ ಸಂದರ್ಭಗಳಲ್ಲಿ ವಿಚಲಿತರಾಗದ ಹರುಷ ಬದಲಿಸಲಾಗದ ಪ್ರಶಾಂತತೆ, ಕುಗ್ಗದ ಉತ್ಸಾಹವುಳ್ಳವರಾಗಿದ್ದು, ಸದಾ ದೈವೀಕ ಅನುಗ್ರಹವನ್ನೇ ನಂಬಿರುತ್ತಿದ್ದರು.' (*Alcune notizie sul Servo di Dio Don Luigi Guanella, 1922*).

***ವಿಶೇಷ ರಾಯಭಾರಿಗಳಾಗಿ ಗುರು ಗ್ವಾನೆಲ್ಲರು ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಭೇಟಿ ನೀಡಿದಾಗ – 1912-1913***



# ಗುರು ಗ್ವಾನೆಲ್ಲ ಮತ್ತು ರೋಮ್ ನಗರ

**ರೋ**ಮ್ ನಗರವು ವಿಶ್ವಗುರು ಪೋಪ್‌ರ ಅಸ್ತಿತ್ವ ಹಾಗೂ ಧರ್ಮಸಭೆಯ ಕೇಂದ್ರವಾದುದರಿಂದ ಗುರು ಗ್ವಾನೆಲ್ಲರನ್ನು ಆಕರ್ಷಿಸಿತು.

ಗುರು ಗ್ವಾನೆಲ್ಲರು ರೋಮ್ ನಗರದ ಬಗ್ಗೆ ಬರೆಯುವಾಗ, ಅದೊಂದು 'ಪುಣ್ಯಕ್ಷೇತ್ರಗಳ ನಗರ' ವಾಗಿದ್ದೂ, ತೀರ್ಥಯಾತ್ರೆಯಾಗಿ ನೋಡುವ ಸ್ಥಳದಂತೆ ಓದುಗರ ಗಮನ ಸೆಳೆಯುತ್ತಾರೆ. ಅಲ್ಲಿಯ ಬೀದಿಗಳು, ಅವುಗಳಲ್ಲಿ ಕೆಲವೊಂದಕ್ಕೆ ಹೆಸರಿಲ್ಲದಿದ್ದರೂ ಅವು ರಕ್ತಸಾಕ್ಷಿ (ಹುತಾತ್ಮ) ಗಳ ರಕ್ತವನ್ನು ನೋಡಿದಂತಹವು. ತಮ್ಮ ಮೇಲೆ ಸಂತರುಗಳು ಹಾದು ಹೋದ ಸ್ಥಳದಲ್ಲಿ, ಧರ್ಮಸಭೆಯು ದೇವಾಲಯಗಳನ್ನು ನಿರ್ಮಿಸಲಾಗಿದೆ ಹಾಗೂ ಭಕ್ತಿ ಪರಿಶುದ್ಧತೆಯ ಕಾರ್ಯವನ್ನು ಬಲಪಡಿಸಿ ವಿಶ್ವಗುರುಗಳು ಇತಿಹಾಸವನ್ನೇ ನಿರ್ಮಿಸಿದ ತಾಣಗಳಾಗಿವೆ.

ಗುರು ಗ್ವಾನೆಲ್ಲರಿಗೆ ರೋಮ್ ನಗರ, ಧರ್ಮಸಭೆ ಹಾಗೂ ವಿಶ್ವಗುರು ಪೋಪ್‌ರು ಏಕ ನೈಜತೆಯಾಗಿದ್ದು, ಆ ಬಗ್ಗೆ ತೀವ್ರತರವಾದ ವಾತ್ಸಲ್ಯವೇ ತಮಗೆ ಆಧ್ಯಾತ್ಮಿಕ ಬೋಧನೆಯಾಯಿತು. ಅವರು ಧರ್ಮಸಭೆಯನ್ನು 'ಪೇತ್ರನ ಭಾಗ' ಹಾಗೂ 'ಕ್ರಿಸ್ತನ ಮದುಮಗಳು' ಎಂಬಂತೆ



ವ್ಯಾಟಿಕನ್ ನಗರದ ಸಂತ ಪೇತ್ರರ ಚೌಕ ಕ್ರೈಸ್ತ ಧರ್ಮದ ತೊಟ್ಟಿಲು

ರೋಮ್ ಧಾರ್ಮಿಕ ಸಭೆಯ ಸಂಸ್ಥಾಪನೆಯ ಮೊದಲ ಪ್ರಯತ್ನಗಳಲ್ಲಿ ಮದೋನ್ನದೆಲ್ ರಿಪೊಸೊ ದೇವಾಲಯ



ಪರಿಗಣಿಸುತ್ತಿದ್ದು, ಅದು ದಾನಶೀಲತೆಯ, ಐಕ್ಯತೆಯ ತಿರುಳಾಗಿದೆ. ಶ್ರೇಷ್ಠವಾದ ಪ್ರೀತಿಯಲ್ಲಿ ಧರ್ಮಸಭೆಯು ಸ್ಫೂರ್ತಿ ಪಡೆದು ಸಂಕಷ್ಟಗಳನ್ನು ಎದುರಿಸುತ್ತಿದ್ದು, ತನ್ನ ಶಕ್ತಿ ತನ್ನನ್ನೆಂದೂ ಕೈಬಿಡದೆಂದು ಬಯಸುವವರಿಗೆ ರಕ್ಷಕರ ಧರ್ಮಸಭೆಯು ಜೀವವಾಗಿದೆ .... ಅದು ಎಲ್ಲವನ್ನೂ ಸಹಿಸಿಕೊಳ್ಳುವ ದೇವರ ಕಾರ್ಯವಾಗಿದೆ (*Opere II/1, 156*). ಧರ್ಮಸಭೆಯು ಈ ಜಗತ್ತಿನಲ್ಲಿ ಮತ್ತು ಇತಿಹಾಸದಲ್ಲಿ ನಿಗೂಢವಾದ ರೀತಿಯಲ್ಲಿ ರಕ್ಷಣೆ ಮತ್ತು ಜೀವ ನೀಡುವ ಹುಳಿ ಹಿಟ್ಟಿನಂತಾಗಲು ಉಗಮವಾಯಿತು. ಶುಭ ಸಂದೇಶದಲ್ಲಿ ಹುಳಿಹಿಟ್ಟಿನ ಸಾಮತಿಯಂತೆ "ಮಾನವ ಕುಲವೇ ಹಿಟ್ಟಾಗಿ, ಅದಕ್ಕೆ ಹುದುಗೆಬ್ಬಿಸುವ ಹುಳಿಯನ್ನು ಕಲಸುವ ಮಹಿಳೆಯು ಧರ್ಮಸಭೆಯಾಗಿ ಹದಮಾಡುವ ಹುಳಿಯೇ ಧರ್ಮಸಭೆ" ಎಂದರು. *(ibid., 298)*

ತಮ್ಮ ಬರವಣಿಗೆಗಳಲ್ಲಿ ಸಾವಿರಾರು ಬಾರಿ ಪ್ರಸ್ತಾಪಿಸಿದ್ದ ರೋಮ್ ನಗರವನ್ನು 1888 ರಲ್ಲಿ ಮೊದಲ ಬಾರಿಗೆ ನೋಡಿದರು.



ಗುರು ಗ್ವಾನೆಲ್ಲ ಹಾಗೂ ಗುರು ಡಾನ್ ಒರಿಯೊನೆ ರೋಮ್ ನಗರದಲ್ಲಿ – 1914



ರೋಂ ನಲ್ಲಿರುವ ಗ್ವಾನೇಲಿಯ ಕನ್ಯಾಸ್ತ್ರೀಯರ ಮೊದಲ ಸಂಸ್ಥೆ (1908) – ಮನೆ ಪಿಯೊ X

ಆ ನಗರದಲ್ಲಿ ದಾನ-ಧರ್ಮಗಳ ಸಂಸ್ಥೆಯೊಂದನ್ನು ಆರಂಭಿಸಬೇಕೆಂಬ ಬಯಕೆಯ ಕಾರಣ, ಅಲ್ಲಿಗೆ ಪದೇ ಪದೇ ಪ್ರಯಾಣ ಮಾಡಿದರು. 'ನಮ್ಮೆಲ್ಲರ ತಂದೆಯ ಸಮ್ಮುಖದಲ್ಲಿ ಕೈಗೊಳ್ಳುವ ಕೆಲಸ-ಕಾರ್ಯಗಳು ಯಶಸ್ವಿ ಮತ್ತು ಪ್ರಗತಿ ಹೊಂದುತ್ತವೆ' (*La Divina Providenza 1914, 69-70*) ಎಂಬಂತೆ, ಅವರ ಇಪ್ಪತ್ತು ವರ್ಷಗಳ ಅವಧಿಯ ಕೆಲಸ-ಕಾರ್ಯಗಳಿಗೆ ರೋಮ್ ನಗರವು ಸಾಕ್ಷಿಯಾಗಿತ್ತು.

ದಿನಾಂಕ 4ನೇ ಅಕ್ಟೋಬರ್ 1903 ರಂದು ದೊನ್‌ಒರಿಯೊನೆ ರಿಂದ ಗುರು ಗ್ವಾನೆಲ್ಲರವರಿಗೆ ಮೊಂತೆಮಾರಿಯೋ ಕೊಲೊನಿ ಹಸ್ತಾಂತರಗೊಂಡ ದಿನದಿಂದ ರೋಮ್‌ನಲ್ಲಿ ಅವರ ಸಕ್ರಿಯ ಕಾರ್ಯಗಳು ಆರಂಭಗೊಂಡಿತ್ತು. ವಯಸ್ಸಿನಲ್ಲಿ ಮೂವತ್ತು ವರ್ಷಗಳಷ್ಟು ಚಿಕ್ಕವರಾದರೂ ಈ ಇಬ್ಬರೂ ಧರ್ಮಗುರುಗಳು, ಏಕಕಾಲಕ್ಕೆ ಸಭೆಯ ಸ್ಥಾಪಕರಾಗಿದ್ದು, ಗುರು ಗ್ವಾನೆಲ್ಲರು ತಮ್ಮ ಕಾರ್ಯಕ್ಷೇತ್ರ ಸೃಷ್ಟಿಯಲ್ಲಿ ಸಂಪೂರ್ಣ ಪರಿಪಕ್ವರಾಗಲು ಕಾಯಬೇಕಿದ್ದು, ಗುರು ಡಾನ್ ಒರಿಯೋನೆ ರವರು ತಾವು ಗುರುವ್ಯಾಸಂಗ ನಿಲಯದಲ್ಲಿ ಧರ್ಮಶಾಸ್ತ್ರದ ವಿದ್ಯಾರ್ಥಿ ಯಾಗಿದ್ದಾಗಲೇ ಇಂತಹ ಕೆಲಸಗಳನ್ನು

ರೋಮ್ ಪಿಯೊ X ನಲ್ಲಿರುವ ಸಂಸ್ಥೆ



*ರೊಮೇನಿಯ ದೇಶದಲ್ಲಿ ವಿವಿಧ ಧಾರ್ಮಿಕ ಸಭೆಗಳೊಂದಿಗೆ ಕಾರ್ಯ ನಿರ್ವಹಣೆ*



ಆರಂಭಿಸಿದ್ದರು. ತಮ್ಮ ಒಳಮನಸ್ಸಿನ ಅಭಿಲಾಷೆಯು ಪ್ರಾರಂಭ ಹಂತದಲ್ಲಿದ್ದ ಎಲ್ಲಾ ಧಾರ್ಮಿಕ ಸಂಸ್ಥೆಗಳು' ಒಂದು ಇನ್ನೊಂದರ ನೆರವಿನಿಂದ ನಿಕಟವಾಗಿ ಒಟ್ಟಾಗಿರಬೇಕೆಂಬ ಕರೆನೀಡಿ, ಆ ಮೂಲಕ ಪವಿತ್ರ ಧರ್ಮಸಭೆಯ ಪಾದದಡಿಯಲ್ಲಿ, ಯೇಸುಕ್ರಿಸ್ತನೊಂದಿಗೆ ಐಕ್ಯವಾಗಬೇಕು' ಎಂಬುದನ್ನು ಗುರು ಗ್ವಾನೆಲ್ಲರವರು ಗುರು ಓರಿಯೋನ್‌ರಲ್ಲಿ ಹೇಳಿಕೊಂಡಿದ್ದರು. 'ಮೊಂತೆ – ಮಾರಿಯೊ' ಎಂಬ ಂಸ್ಥೆಯ ಸ್ಥಾಪನೆಯ ಮೂಲಕ ಅವರ ರೋಮ್‌ನ ಕಾರ್ಯಕ್ಷೇತ್ರ ಮೊದಲು 'ಜಾನಿಕುಲಮ್' ಎಂಬಲ್ಲಿದ್ದ ಕನ್ಯಾಸ್ತ್ರೀಮಠಕ್ಕೂ, ನಂತರ 1908 ರಲ್ಲಿ, ಆಗತಾನೇ ಅಲ್ಲಿಯ ಪುರಸಭೆಯಿಂದ ಮರಳಿ ಪಡೆದ ' ಸನ್ ಪಂಕ್ರಾಸಿಯೋ' ಎಂಬಲ್ಲಿಯ ಈ ಹಿಂದಿನ ಕಾರ್ಮೆಲ್ಲರ 'ಕನ್ಯಾಸ್ತ್ರೀ ಮಠ'ಕ್ಕೂ ವಿಸ್ತರಣೆಯಾಯಿತು. ಗುರು ಗ್ವಾನೆಲ್ಲರವರು ಆಗಾಗ 'ಮೊಂತೆ – ಮಾರಿಯೊ' ಕ ಲೋನಿಗೆ ಭೇಟಿ ಮಾಡುತ್ತಿದ್ದು, ಅಲ್ಲೇ ಹತ್ತಿರದಲ್ಲೇ ಇದ್ದ 'ತ್ರಿಯೋನ್‌ಫಾಲೆ' ಎಂಬಲ್ಲಿ ಅದರ ಪ್ರಾಚೀನ ವೈಭವದ ಒಂದು ಕುರುಹೂ ಇಲ್ಲದಿದ್ದು, ಅಲ್ಲಿಯ ತೀವ್ರ ಬಡತನ ಹಾಗೂ ವ್ಯಾಪಕ ಅಗತ್ಯಗಳ ದುಸ್ಥಿತಿಯನ್ನು ಗಮನಿಸುತ್ತಿದ್ದರು. ಆ ಜಿಲ್ಲೆಯ ವಾಸ್ತವ ಹಾಗೂ ಪ್ರಾಮಾಣಿಕವಾಗಿ ಒಂದು ಸೇವಾಕಾರ್ಯದ ಪ್ರದೇಶದಂತೆ ಕಾಣುತ್ತಿತ್ತು. 'ನಗರದ ತಿರಸ್ಕೃತರುಗಳನ್ನೇ ಅಡಗಿಸಿಟ್ಟುಕೊಂಡಿರುವ ಆ ಪ್ರದೇಶದಲ್ಲಿ ಯಾವ ಧಾರ್ಮಿಕ ಸಭೆಗಳೂ ನೆಲೆಸಲು ಒಲವು ತೋರಿಸಿರಲಿಲ್ಲ' (*P. Bertani, Piccola Storia della fondazione di San Giuseppe in Roma, 1992, 27*).

*ಪುನೀತರ ಪಟ್ಟಕ್ಕೇರಿದ ಗುರು ಗ್ವಾನೆಲ್ಲ – 1913*



ಈ ಹೀನ ದುಃಸ್ಥಿತಿಯ ಬಗ್ಗೆ ಮರುಕಗೊಂಡ ಗುರು ಗ್ವಾನೆಲ್ಲರವರು ತಮ್ಮ ಆಪ್ತರಾಗಿದ್ದ ವಿಶ್ವಗುರು ಪೋಪ್ ಹತ್ತನೇ ಭಕ್ತಿನಾಥರ ನೆರವಿನಿಂದ, ಅಲ್ಲೊಂದು ತಮ್ಮ ಅಸ್ತಿತ್ವ ಸ್ಥಾಪನೆಯ ಬಗ್ಗೆ ತೀರ್ಮಾನಿಸಿದರು. ಕೆಲವೊಂದು ಕಳಪೆಯಾದ ಮನೆಗಳಲ್ಲಿ ಕನ್ಯಾಸ್ತ್ರೀಯರು ಕೆಲವು ಮಕ್ಕಳನ್ನು ಒಟ್ಟುಸೇರಿಸಿದರು. ಅವರ ಗುರುಗಳು ಕ್ರಿಸ್ತನ ಪ್ರೀತಿಯಿಂದ ತಮ್ಮಲ್ಲಿದ್ದುದನ್ನು ಒಗ್ಗೂಡಿಸಿ ಮಿಕ್ಕೆಲ್ಲ ಅಗತ್ಯಗಳನ್ನು ಪೂರೈಸುತ್ತಿದ್ದರು. ಅಲ್ಲಿದ್ದ 'ಬಸಿಲಿಕ' (ಪುಟ್ಟ ಮಹಾದೇವಾಲಯ) ವು 1909ನೇ ಇಸವಿಯಷ್ಟು ಹಿಂದಿನ ಚಿಕ್ಕ ಕಟ್ಟಿಗೆಯಿಂದ ಕಟ್ಟಿದ್ದ ಮೊದಲ

ದೇವಾಲಯವಾಗಿದ್ದು, ದಿನಾಂಕ 19 ಮಾರ್ಚ್ 1912 ರಲ್ಲಿ ಉದ್ಘಾಟನೆಗೊಂಡ ಈಗಿನ ಮಹಾದೇವಾಲಯದ ನಿರ್ಮಾಣ ಕಾರ್ಯವು ಆಗತಾನೆ ಆರಂಭಗೊಂಡಿತ್ತು. ಗುರು ಅಲೋಷಿಯಸ್ ಗ್ವಾನೆಲ್ಲರವರು ತಮ್ಮ ಗುರುಗಳಿಗೆ ವಹಿಸಿಕೊಟ್ಟಿದ್ದ ಶುಭಸಂದೇಶ ಪ್ರಸಾರ ಕಾರ್ಯದ ಪ್ರಯೋಜನವನ್ನು ಜನ ಅನುಭವಿಸುತ್ತಿದ್ದರು. 'ದೇವಾಲಯದಿಂದ ಹೊರಗಿನ ಚೌಕದ ಬಳಿಗೆ ಬರುತ್ತಿದ್ದ ಗುರುಗಳು ಅನೇಕ ಸಾಮಾಜಿಕ ರೂಪದ ಗಾಯಗಳನ್ನು ಗುಣಪಡಿಸಬಲ್ಲವರಾಗಿದ್ದರು' (*La Divina, Provvidenza, 1914, 20*). ಗುರು ಗ್ವಾನೆಲ್ಲರು ಆ ಬಗ್ಗೆ ಹೀಗೆ ಬರೆದಿದ್ದಾರೆ. 'ನಮ್ಮ ರಾಣಿ ಹಾಗೂ ಮಾತೆಯಾದ ದೈವೀಕ ಭಾಗ್ಯಕ್ಕೆ ಪ್ರಿಯರಾದವರಾರಿಗೂ ಬಾಗಿಲು ಮುಚ್ಚಬೇಡಿ. ಯಾರಿಗೂ ಅತ್ಯಂತ ಹೀನ ನೋವನ್ನುಂಟು ಮಾಡಬೇಡಿ. ಅತ್ಯಂತ ಬಡವರಿಗೆ, ಅವರೆಷ್ಟೇ ತಪ್ಪು ಮಾಡಿದರೂ ಎಷ್ಟೇ ಕೀಳುಮಟ್ಟದವರಾಗಿದ್ದರೂ, ಮೊದಲ ಆದ್ಯತೆ ನೀಡಿ, ಏಕೆಂದರೆ ಕರ್ತದೇವರೇ ಈ ಬಡವರ ಹಾಗೂ ಶೋಷಿತರ ರಕ್ಷಕರಾಗಿದ್ದಾರೆ. ಜೊತೆಗೆ ಸಂಕಷ್ಟ ಅಥವಾ ಬಡತನದ ಬಗ್ಗೆ ಹೆದರಬೇಡಿ. ಏಕೆಂದರೆ ತಿರಸ್ಕೃತರಿಗೆ ನೆರವಾಗಿರಲು ಆದೇಶ ಮತ್ತು ಕರೆ, ಕರ್ತದೇವರಿಂದಲೇ ಬಂದಿದೆ. ನನಗಾಗಿ ಈ ಅನಾಥ ಹಾಗೂ ನೆರವಿಲ್ಲದವರನ್ನು ಕೈಹಿಡಿದು ಅವರಿಗೆ ಆಹಾರ ನೀಡಿ ಹಾಗೆ ಮಾಡುವ ನಿಮಗೆ ಪ್ರತಿಫಲ ನೀಡುವೆನು' ಎಂಬುದಾಗಿ ದೇವರು ದೃಢವಾಗಿ ಹೇಳಿದ್ದಾರೆ.' (*Opere IV, 796*)



**ರೋಮ್ :**
**ಟ್ರಿಯೊನ್‌ಫಾಲೆ ಜಿಲ್ಲೆಯಲ್ಲಿರುವ ಸನ್ ಜುಸೆಪ್ಪೆ ಮಹಾದೇವಾಲಯ**



**ಸೂರ್ಯಾಸ್ತಮ**
**ಅತಿ ಸುಂದರ;**
**ಮನುಷ್ಯನ ಬದುಕಿನ ಅಂತ್ಯವು**
**ಅತಿಪ್ರಿಯ.**
**- ಸ್ವಾಮಿ ಗ್ವಾನೆಲ್ಲ**

# ತಿರಸ್ಕೃತರೇ ಪ್ರಥಮರು



ಮೆಕ್ಸಿಕೊ ದೇಶ ಮಕ್ಕಳೊಡನೆ ಗ್ವಾನೆಲ್ಲಿಯನ್ ಕನ್ಯಾಸ್ತ್ರೀ

ದೌರ್ಬಲ್ಯದ ಪರಿಸ್ಥಿತಿಯಲ್ಲಿರುವವರು, ಬಡವರು, ಅಂಗವಿಕಲರು, ವೃದ್ಧರು ಹಾಗೂ ಶಿಕ್ಷಣದ ಅಗತ್ಯವಿರುವ ಯುವಜನರು ಇವರೆಲ್ಲರೊಂದಿಗೆ ಸ್ವಾಮಿ ಅಲೋಷಿಯಸ್ ಗ್ವಾನೆಲ್ಲರವರ ಹೆಸರು ಪ್ರಮುಖ ಸ್ಥಾನ ಹೊಂದಿದೆ. ಆರಂಭದ ಹೆಜ್ಜೆಗಳಿಂದಲೇ, ಅವರ ಧಾರ್ಮಿಕ ಸಭೆಗಳು, 'ಕಟ್ಟಕಡೆಯವರು' ಎಂದು ಪರಿಗಣಿಸಲ್ಪಟ್ಟ, ಅಂದರೆ ಇತರ ಎಲ್ಲಾ ಸಂಸ್ಥೆಗಳು ಕಡೆಗಣಿಸಿದ್ದರೂ, ಪಿತದೇವನಿಗೆ ಪ್ರಿಯರಾದವರೆನಿಸಿದ ಅತ್ಯಂತ ತಿರಸ್ಕೃತರನ್ನು ಆಶ್ರಯಿಸಿತು.

ಕಷ್ಟಕ್ಕೊಳಗಾಗಿರುವ ಸಹೋದರನೊಬ್ಬನ ನೆರವಿಗೆ ಧಾವಿಸುವ ಹೃದಯ ಕ್ರೈಸ್ತನಿಗಿರಬೇಕು. ಈ ಕಾರಣದಿಂದ ಗುರು ಗ್ವಾನೆಲ್ಲರವರು ಈ ತಮ್ಮ ದೈವೀಕ ಪ್ರಸನ್ನತೆಯನ್ನು ನಿಶ್ಚಲವಾಗಿ ಕಾಣಲು ಆಶಿಸಿದರು. ದಾರಿಯಲ್ಲಿಯ ಕೊಳದ ಬದಿಗಿದ್ದ ಪಾರ್ಶ್ವವಾಯು ಪೀಡಿತನೊಬ್ಬನು 'ಪ್ರಭುವೆ, ನನಗೆ ಸಹಾಯ ಮಾಡುವವರು ಯಾರೂ ಇಲ್ಲ' (ಯೊವಾನ್ನ 5:7) ಎಂದು ಅಂಗಲಾಚಿದಾಗ, ಯೇಸು ಅವರ ಬದುಕನ್ನು ತುಂಬಿ, ಸೇವಾಪ್ರವೃತ್ತಿಯ ಕಾರ್ಯಗಳಿಗೆ ಸ್ಫೂರ್ತಿ ನೀಡಿದರು. 1913 ರ ಹೊತ್ತಿಗಾಗಲೆ ಅವರು ಕನ್ಯಾಸ್ತ್ರೀಯರನ್ನು ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಕರೆದೊಯ್ಯುವಲ್ಲಿ ಯಶಸ್ವಿಯಾಗಿದ್ದರು. ಅವರು ತಮ್ಮ ಅನುಯಾಯಿಗಳಿಗೆ 'ಇಡೀ ಜಗತ್ತೇ ನಿಮ್ಮ ಮಾತೃಭೂಮಿ' ಎಂದು ಹೇಳಿ, ಇಂದು ಗ್ವಾನೆಲ್ಲ ಗುರುಗಳು ಹಾಗೂ ಕನ್ಯಾಸ್ತ್ರೀಯರು, 'ಜಗತ್ತಿನ ನಾಲ್ಕೂ ದಿಕ್ಕುಗಳನ್ನು ಒಗ್ಗೂಡಿಸುವ ಸಾಧನ' (*Opere IV, 763*) ದಲ್ಲಿ ಕ್ರಿಸ್ತನ ದಾನಶೀಲತೆಗೆ ಸಾಕ್ಷಿಯಾಗಿದ್ದು, ನಾಲ್ಕೂ ಖಂಡಗಳ 20 ರಾಷ್ಟ್ರಗಳಲ್ಲಿ ತಮ್ಮ ಅಸ್ತಿತ್ವವನ್ನು ಹೊಂದಿದ್ದಾರೆ. ಅವರ ಪ್ರೇಷಿತತ್ವವು ಮಾನವೀಯತೆಯ ದೃಷ್ಟಿಯಲ್ಲಿ ಬೆಂಬಲ ಪಡೆದಿದ್ದು, ಅಲ್ಲಿ ಸೃಷ್ಟಿಯ ಹಿರಿಮೆ ಹಾಗೂ ದಯಾಶೀಲ ಕಾರ್ಯಗಳು ಒಂದಕ್ಕೊಂದು ಹೆಣೆದುಕೊಂಡಿವೆ. ಮಾನವನು 'ಜ್ಞಾನದ ಅವತಾರ'ವಾಗಿದ್ದರೂ, 'ಸೃಷ್ಟಿಯ ಮುಕುಟವಾಗಿ' ಸಮೃದ್ಧವಾಗಿದ್ದರೂ

ಫಿಲಿಪ್ಪೀನ್ಸ್ ದೇಶದಲ್ಲಿರುವ ಗ್ವಾನೆಲ್ಲಿಯನ್ ಸಂಸ್ಥೆ



ರೊಟ್ಟಿ ಹಾಗೂ ದೇವರನ್ನೂ ಅವರಿಗೆ ನೀಡಿ.

– ಗುರು ಗ್ವಾನೆಲ್ಲ

(*Opere 11/1, 20-21, 954*) ಆದರಲ್ಲಿ 'ಸೃಷ್ಟಿಯಲ್ಲಿ ದೇವರ ಶ್ರೇಷ್ಠ ಕಾರ್ಯ' ಉತ್ಕೃಷ್ಟವಾದುದಾಗಿದ್ದು, ಆದರೂ ಒಣಗಿದ ಎಲೆಯಂತೆ ಜನರ ಜೀವನವು ಚಿಂತಾಜನಕ ಎಂಬುದನ್ನು ಸ್ಮರಿಸುತ್ತಾರೆ. (*Opere, III, 346-347*) ಆದರೆ, ಸಕಲ ಮಾನವರೂ ದೇವರ ಸ್ವರೂಪದಲ್ಲಿದ್ದು 'ಶ್ರೇಷ್ಠ ಮುದ್ರೆಯಾಗಿರುವುದರಿಂದ ವ್ಯಕ್ತಿಯ ಗೌರವವನ್ನು ಯಾವುದೇ ದೈಹಿಕ ಅಥವಾ ಮಾನಸಿಕ ದುರ್ಬಲತೆಗಳು ಕುಗ್ಗಿಸಬಾರದು. (ಅದೇ ಪುಟ 272). ಬುದ್ಧಿಮಂದ ವ್ಯಕ್ತಿಗಳಲ್ಲಿ ಹಾಗೂ ವಂಚಿತಗೊಂಡ ಪ್ರತಿ ಮುಖದಲ್ಲೂ, ದೈವೀಕ ಕಿಡಿಯನ್ನು ಸ್ವಾಮಿ ಗ್ವಾನೆಲ್ಲರು ಕಂಡರು; ಅವರು ತಮ್ಮ ಧಾರ್ಮಿಕ ಬಂಧುಗಳಿಗೆ ಹೀಗೆ ಹೇಳುತ್ತಿದ್ದರು; 'ಕಾಣಲಾಗದ ನಮ್ಮ ದೇವರನ್ನು ನಮ್ಮ ಆತ್ಮಗಳು ಪ್ರೀತಿಸುತ್ತವೆ. ನಮ್ಮ ಸುತ್ತಮುತ್ತಲಿರುವ ನಮ್ಮ ನೆರೆಯವರು ವಿಪರೀತ ಬಾಧೆಪಡುವ ಜನರಾಗಿದ್ದರೂ, ಅವರಲ್ಲಿ ಪ್ರತಿಯೊಬ್ಬರೂ ದೇವರ ಸ್ವರೂಪವಾಗಿರುವುದರಿಂದ, ನಮ್ಮ ಸಹೋದರ ಹಾಗೂ ಸಹೋದರಿಯರ ಈ ಸಮಾಜದಲ್ಲಿ ನಾವು ಸಂತಸದಿಂದಲೇ ಇರೋಣ. ನಮ್ಮ ಸುತ್ತಮುತ್ತಲಲ್ಲಿರುವವರಲ್ಲಿ ಯಾರಾದರೊಬ್ಬರು ಶರೀರ ಹಾಗೂ ಮಾನಸಿಕ ಕೊರತೆ ಹೊಂದಿದ್ದಲ್ಲಿ, ಅಂತಹವರು ನಮಗೆ ಅತಿಪ್ರಿಯರಾಗುತ್ತಾರೆ.' (ಅದೇ ಪುಟ 878–879). ಕೊರತೆಗಳ ಹಾಗೂ ನೋವಿನಲ್ಲಿರುವವರನ್ನು ಕಂಡು ಅರ್ಥಮಾಡಿಕೊಳ್ಳುವ ವಿಶೇಷ ಮನಸ್ಸುಳ್ಳವರು ಒಂದು ವರದಾನವಾಗಿರುತ್ತಾರೆ. ಗುರು ಗ್ವಾನೆಲ್ಲರವರು ಖುದ್ದು ತಾವೇ 'ಸಕಲರ ಸೇವಕ'ರಾಗಿದ್ದು (1 ಕೊರಿಂಥಿಯನ್ನರು 9:19), ತಮ್ಮ ಪ್ರತಿಭೆಯನ್ನು ಸಂಕಷ್ಟಕ್ಕೊಳಗಾಗಿರುವ ತಮ್ಮ ನೆರೆಯವನ ಲೌಕೀಕ ಹಾಗೂ ಆಧ್ಯಾತ್ಮಿಕ ಏಳಿಗೆಗಾಗಿ ಶ್ರಮಿಸಿದವರು.



*ಇಂಡಿಯ (ಭಾರತ) ದೇಶದಲ್ಲಿ ಬಡ ಮಕ್ಕಳೊಂದಿಗೆ*

ಯಾವಾಗಲೂ ದೇವರ ಕೊಡುಗೆಯಲ್ಲಿ ವಿಶ್ವಾಸವಿಟ್ಟಿದ್ದ ಅವರು, ತಂದೆ ತಾಯಿಗಿದ್ದ ತನ್ನ ಧಾರ್ಮಿಕ ಸಹೋದರ ಸಹೋದರಿಯರ ಮಠಗಳ ಬಾಗಿಲು ತಟ್ಟುವ ಯಾರನ್ನು ಹಿಂದಕ್ಕೆ ಕಳುಹಿಸುವ ಊಹೆ ಎಂದಿಗೂ ಮಾಡಲಿಲ್ಲ.

*ಕೊಂಗೊ ದೇಶದಲ್ಲಿ ಗ್ವಾನೆಲ್ಲಿಯನ್ ಸೇವಕರು*



ವಂದಿತ ಸ್ವಾಮಿ ಅಲೋಷಿಯಸ್ ಗ್ವಾನೆಲ್ಲರವರು ದಿನಾಂಕ 24 ಅಕ್ಟೋಬರ್ 1915 ರಂದು ತಮ್ಮ 73ನೇ ವಯಸ್ಸಿನಲ್ಲಿ ನಿಧನರಾದರು. ತಾವೇ ಸ್ಥಾಪಿಸಿದ ಕೋಮೊನಲ್ಲಿಯ ಪವಿತ್ರ ಹೃದಯದ

ಕೋಮೊ
1915 ರ ಅಕ್ಟೋಬರ್ ತಿಂಗಳು ಅಸಂಖ್ಯಾತ ಜನರ ಗುರು ಅಲೋಷಿಯಸ್ ರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿತ್ತು




ಪುಣ್ಯಕ್ಷೇತ್ರದ ದೇವಾಲಯದಲ್ಲಿ ಅವರ ಪಾರ್ಥಿವ ಶರೀರವನ್ನು ಇಡಲಾಗಿದೆ. ವಿಶ್ವಗುರು ಪೋಪ್ ಆರನೇ ಚಿನ್ನಪ್ಪ (ಪೌಲ) ನವರು ದಿನಾಂಕ 25 ಅಕ್ಟೋಬರ್ 1964 ರಂದು, ಅಂದರೆ ಅವರು ತೀರಿಕೊಂಡ ಐವತ್ತು ವರ್ಷಗಳ ನಂತರ 'ಪುನೀತರು' ಎಂಬ ಸ್ಥಾನಕ್ಕೇರಿಸಿದರು. ಪೋಪ್ 16ನೇ ಬೆನಡಿಕ್ಟ್ ರವರು ಅಕ್ಟೋಬರ್ 23, 2011 ರಂದು ಅವರನ್ನು ಸಂತರನ್ನಾಗಿ ಘೋಷಿಸಿದರು. 'ಇದೀಗ ನಾವು ಅವರ ಪರಿಶುದ್ಧತೆಯ ರಹಸ್ಯವನ್ನು ಅರ್ಥಮಾಡಿ ಕೊಳ್ಳಬಹುದಾಗಿದೆ. ಗುರು ಗ್ವಾನೆಲ್ಲರವರು ದಯಾವಂತ ದೇವರನ್ನು ಪ್ರೀತಿಸಿದರು ಮತ್ತು ಪ್ರೀತಿಸುವಂತೆ ಮಾಡಿದರು. ಕಾರಣ ತನ್ನ ಮಕ್ಕಳ ಹಾದಿಯಲ್ಲಿ ಅಡ್ಡಬರುವ ಅಡಚಣೆಗಳನ್ನು ಸಂಪೂರ್ಣವಾಗಿ ನಿವಾರಿಸುವ ಅಥವಾ ಅವರಿಗೆ ಸಕಲ ಅಗತ್ಯಗಳನ್ನು ಒದಗಿಸುವುದರಲ್ಲಿ ಅಶಕ್ತರಾದರೂ ಅವರ ಮನದಲ್ಲಿ ಮನೆಮಾಡಿ, ಪರಿಸ್ಥಿತಿಯನ್ನು ಅನುಭವಿಸಿ ಹಾಗೂ ನಾನಿದ್ದೇನೆ ಎಂಬ ಭರವಸೆಯನ್ನು ನೀಡುತ್ತಾರೆ. ಅವರ ಪ್ರಸನ್ನತೆಯು ಜೀವನದ 'ಹಾದಿಯಲ್ಲಿರುವ ಅಡಚಣೆಗಳನ್ನು' ಎದುರಿಸುವ ಶಕ್ತಿಯನ್ನು ನೀಡುತ್ತಾ ಸದಸ್ಯರ ಹೃದಯ ಹಾಗೂ ಬದುಕುಗಳನ್ನು ತಳಮಳಗೊಳಿಸುವ ಬಿರುಗಾಳಿಯನ್ನೂ ಪ್ರಶಾಂತಗೊಳಿಸಬಲ್ಲದು.

**"ಪಾವನತೆ ವಿಶ್ವವನ್ನು ರಕ್ಷಿಸುತ್ತದೆ."**



ಕೋಮೊನಲ್ಲಿಯ ಪವಿತ್ರ ಹೃದಯ ಪುಣ್ಯಕ್ಷೇತ್ರದಲ್ಲಿರುವ ಪುನೀತ ಗ್ವಾನೆಲ್ಲರ ಪಾರ್ಥಿವ ಶರೀರದ ಸಂಪುಟ



ಭಾರತ ದೇಶದಲ್ಲಿ ಅಭ್ಯಾಸ ಮಾಡಿದ ಪ್ರಥಮ ಗುರುಗಳೊಂದಿಗೆ, ಸಭೆಯ ಪ್ರಮುಖರು
ಹಾಗೂ ಪಾಂಡಿಚೇರಿ – ಕಡಲೂರಿನ ಮಹಾಧರ್ಮಾಧ್ಯಕ್ಷರು



ಧರ್ಮಸಭೆಯಿಂದ ಅಂಗೀಕಾರ ಪಡೆದ ದಶಮಾನೋತ್ಸವ ಸಮಾರಂಭದಲ್ಲಿ ದೈವಾನುಗ್ರಹ ಮಾತೆಯ
ಪುತ್ರಿಯರೊಂದಿಗೆ ವ್ಯಾಟಿಕನ್ ನಗರದ ಕಾರ್ಯದರ್ಶಿ ಕಾರ್ಡಿನಲ್ ತಾರ್ಸಿನಿಯೊ ಬೆರ್ಟೋನ್



ಗ್ವಾನೇಲಿಯ ಸಭೆಯ ಪ್ರಮುಖರು ಭಾರತಕ್ಕೆ ಆಗಮನ



ಭಾರತ ಮಣ್ಣಿನಲ್ಲಿ
ದಾನ ಸೇವಕರ
ಸಭೆಯ ಪ್ರಥಮ
ಗುರುಮಾನವರು



ದಯಾಪೂರಿತ
ಮರಿಯಮ್ಮನವರ
ಪುತ್ರಿಯರ
ನೊವಿಷಿಯೇಟ್ -
ಸಂತ. ಜೋಸೆಫ್
ನಿವಾಸ



ಆಪ್ತ
ಪುಟಾಣಿಗಳೊಂದಿಗೆ
ದಯಾಪೂರಿತ
ಮರಿಯಮ್ಮನವರ
ಪುತ್ರಿಯರು.







ಭಾರತ ನಾಡಿನಲ್ಲಿ
ಪ್ರಥಮ ಗ್ವಾನೇಲಿಯನ್
ಸಾಕ್ಷಿಗಳು:
ಡೊನ್ ಡೊಮೆನ್ನಿಯೊ,
ಸೊಲ್ ಎರಿನಾ ಬೆರ್ಜೊವಿನಿ








ದಯಾಪೂರಿತ
ಮರಿಯಮ್ಮನವರ
ಪುತ್ರಿಯರ
ಒಂದು ತಂಡ



ದಾನ ಸೇವಕರ
ಸಭೆಯ
ನೊವಿಷಿಯೇಟ್
ಹಾಗೂ ತತ್ವಶಾಸ್ತ್ರ
ಅಧ್ಯಯನ ಕೇಂದ್ರ

ಸ್ವಾಮಿ ಗ್ವಾನೆಲ್ಲರವರ ‘ನಾಗರೀಕ ಮತ್ತು ವಿಶ್ವಾಸ ಕಾರ್ಯವು‘
ಧರ್ಮಸಭೆಯ ಆಶೀರ್ವಾದದೊಂದಿಗೆ ಒಂದು ಪೀಳಿಗೆಯಿಂದ
ಮತ್ತೊಂದು ಪೀಳಿಗೆಗೆ ನಿರಂತರ ಸಾಗುತ್ತಿದೆ (ಅಗಸ್ಟೀನ್ ಜೆಮೇಲಿ)
ಕರ್ನಾಟಕದಲ್ಲಿ ನಮ್ಮ ಅಸ್ತಿತ್ವದಿಂದ ಅವರ ನುಡಿ ನನಸಾಯಿತು.




















GUANELLA PREETHI NIVAS




# ಪರಿವಿಡಿ


| | |
|---|---|
| ಪರಿಚಯ | 3 |
| 1842 ರಲ್ಲಿ | 5 |
| ತಾಯಿ-ತಂದೆಯರು | 8 |
| ಯಾಜಕತ್ವಕ್ಕೆ ದೈವಕರೆ | 12 |
| ಪರ್ವತಗಳಲ್ಲಿ ಶುಭ ಸಂದೇಶ ಪ್ರಚಾರಕರು | 16 |
| ಡಾನ್ ಜಾನ್ ಬೋಸ್ಕೊ ಅವರೊಂದಿಗೆ | 20 |
| ವಾಸಸ್ಥಳದ ಸಿದ್ಧತೆ | 24 |
| ಸೇವಾಕಾರ್ಯದ ಉಗಮ | 27 |
| ದಯಾಳತೆಯ ಸಂಪುಟ | 32 |
| ಅನುಮೋದನೆಗಾಗಿ ಹಾತೊರೆಯುವಿಕೆ | 36 |
| ಗುರು ಗ್ವಾನೆಲ್ಲ ಮತ್ತು ರೋಮ್ ನಗರ | 39 |
| ತಿರಸ್ಕೃತರೇ ಪ್ರಥಮರು | 44 |


For information:


**Daughters of St. Mary of Providence**
4/1, John Armstrong Road, Richards Town,
Bangalore - 560 084. Karnataka State
Tel : 080-25479309, Fax : 080-25472306
E-mail : dsmpblor@gmail.com

**Servants of Charity**
Guanella Preethi Nivas, Kothanur (P.O.)
Bangalore - 560 077. Karnataka State.
Tel : 080-28445501, Fax : 080-28445500
E-mail :gpnbangalore@yahoo.com